# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಮಾರ್ಚ್ 09, 2022

ಸಂಪುಟ : 48 ಸಂಚಿಕೆ : 298 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




ಬೆಲ್ಲದ ಬಂಡಿ .. ದಾವಣಗೆರೆ ತಾಲ್ಲೂಕು ದೇವರಹಟ್ಟಿ ಗ್ರಾಮದ ಶ್ರೀ ದೇವರಹಟ್ಟಿ ಬಸವಣ್ಣನ ರಥೋತ್ಸವದ ಅಂಗವಾಗಿ ಮಂಗಳವಾರ ಸಂಜೆ ಬೆಲ್ಲದ ಬಂಡಿ ಹಾಗೂ ಹೋರಿಗಳ ಮೆರವಣಿಗೆ ನಡೆಯಿತು.

ಚಿತ್ರ: ರಫೀಕ್, ಜನತಾವಾಣಿ

## ತೈಲ ಬೆಲೆಯಿಂದ ಆರ್ಥಿಕತೆ ಮೇಲೆ ಪರಿಣಾಮ



### ಇನ್ನೆರಡು ದಿನಗಳಲ್ಲಿ ಪೆಟ್ರೋಲ್ ಬೆಲೆ ಏರಿಕೆ ಕುರಿತು ನಿರ್ಧಾರ

ನವದೆಹಲಿ ಮಾ. 8 – ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಾಗುವುದು ಬರುವ ಹಣಕಾಸು ವರ್ಷದ ಬಜೆಟ್ ಅಂದಾಜುಗಳ ಮೇಲೆ ಪರಿಣಾಮ ಬೀರಲಿದೆ. ತೈಲ ಬೆಲೆ ಏರಿಕೆ ದೇಶದ ಆರ್ಥಿಕತೆ ಮೇಲೆ ಪರಿಣಾಮ ಬೀರಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕಳವಳ ವ್ಯಕ್ತಪಡಿಸಿದ್ದಾರೆ.

ಕಚ್ಚಾ ತೈಲ ಬೆಲೆ ಏರಿಕೆಗಾಗಿ ಬಜೆಟ್‌ನಲ್ಲಿ ಕೆಲ ವ್ಯವಸ್ಥೆಗಳನ್ನು ಮಾಡಲಾಗಿದೆ. ಆದರೆ ಈಗ ತೈಲ ಬೆಲೆ ಅಂದಾಜಿಸಿದ ಹಂತ ದಾಟಿದೆ. ಪರಿಸ್ಥಿತಿ ನಿಭಾಯಿಸುವ ಬಗ್ಗೆ ನಾವು ವಿಚಾರ ಮಾಡಬೇಕಿದೆ ಎಂದು ಸೀತಾರಾಮನ್ ತಿಳಿಸಿದ್ದಾರೆ. ಸೋಮವಾರದಂದು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 140 ಡಾಲರ್‌ಗಳವರೆಗೆ ತಲುಪಿತ್ತು. ನಂತರ ಮಂಗಳವಾರ ಕಚ್ಚಾ ತೈಲ ಬೆಲೆ 129 ಡಾಲರ್‌ಗಳವರೆಗೆ ಇಳಿಕೆ ಯಾಗಿದೆ. ಜನವರಿಯಲ್ಲಿ ಕಚ್ಚಾ ತೈಲದ ಬೆಲೆ 80-87 ಡಾಲರ್‌ಗಳ ಹಂತದಲ್ಲಿತ್ತು. ಆ ಅವಧಿಯಲ್ಲೇ ಬಜೆಟ್ ರೂಪಿಸಲಾಗಿತ್ತು.

ಪ್ರತ್ಯೇಕ ಹೇಳಿಕೆ ನೀಡಿರುವ ತೈಲ ಸಚಿವ ಹರ್‌ದೀಪ್ ಸಿಂಗ್ ಪುರಿ, ತೈಲ ಕಂಪನಿಗಳು ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿವೆ ಎಂದಿದ್ದಾರೆ.

ಉಕ್ರೇನ್‌ನಲ್ಲಿ ಯುದ್ಧ ನಡೆಯುತ್ತಿದ್ದರೂ ಸಹ, ತೈಲ ಪೂರೈಕೆಯಲ್ಲಿ ಯಾವುದೇ ತೊಡಕಾಗುವುದಿಲ್ಲ ಎಂದು ಹೇಳಿರುವ ಪುರಿ, ಕಚ್ಚಾ ತೈಲದ ಬೆಲೆ ಹೆಚ್ಚಾಗಿರುವ ಕಾರಣ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಹೆಚ್ಚಿಸುವ ಬಗ್ಗೆ ಕಂಪನಿಗಳೇ ನಿರ್ಧಾರ ತೆಗೆದುಕೊಳ್ಳಲಿವೆ ಎಂದು ತಿಳಿಸಿದ್ದಾರೆ.

ಮಂಗಳವಾರದಂದು ರಾಜಧಾನಿ ದೆಹಲಿ ಹಾಗೂ ಸುತ್ತಲಿನ ನಗರಗಳಲ್ಲಿ ಸಿ.ಎನ್.ಜಿ. ಬೆಲೆಯನ್ನು ಕೆಜಿಗೆ 50 ಪೈಸೆ ಹೆಚ್ಚಿಸಲಾಗಿದೆ.

ಚುನಾವಣಾ ದಿನಗಳಲ್ಲಿ ಕಚ್ಚಾ ತೈಲದ ಬೆಲೆ ಶೇ.60ರಷ್ಟು ಏರಿಕೆಯಾಗಿದ್ದರೂ ಸಹ, ಪೆಟ್ರೋಲ್ ಬೆಲೆ ಹೆಚ್ಚಳ ಮಾಡಿರಲಿಲ್ಲ. ಚುನಾವಣೆ ಮುಗಿದ ನಂತರ ತೈಲ ಬೆಲೆ ಮತ್ತೆ (3ನೇ ಪುಟಕ್ಕೆ)

### ರಷ್ಯಾದಿಂದ ತೈಲ ಖರೀದಿ ನಿಲ್ಲಿಸಿದ ಶೆಲ್

ಲಂಡನ್, ಮಾ. 8 – ರಷ್ಯಾದಿಂದ ತೈಲ ಹಾಗೂ ನೈಸರ್ಗಿಕ ಅನಿಲ ಖರೀದಿಸುವುದನ್ನು ನಿಲ್ಲಿಸಲಾಗುವುದು. ಆ ದೇಶದಲ್ಲಿರುವ ಸೇವಾ ಕೇಂದ್ರ ಹಾಗೂ ಇತರೆ ಕಾರ್ಯಾಚರಣೆಗಳನ್ನೂ ನಿಲ್ಲಿಸಲಾಗುವುದು ಎಂದು ಶೆಲ್ ಕಂಪನಿ ತಿಳಿಸಿದೆ. ಕಚ್ಚಾ ತೈಲ, ಪೆಟ್ರೋಲಿಯಂ ಉತ್ಪನ್ನ, ನೈಸರ್ಗಿಕ ಅನಿಲ ಹಾಗೂ ಎಲ್.ಎನ್.ಜಿ. ಪಡೆಯುವುದನ್ನು ನಿಲ್ಲಿಸಲಾಗುವುದು ಎಂದು ಶೆಲ್ ಹೇಳಿದೆ.

## ಎನ್.ಡಿ.ಎ.ದಲ್ಲಿ ಪರಿಶಿಷ್ಟ, ಒ.ಬಿ.ಸಿ. ಮೀಸಲಾತಿ ಅರ್ಜಿ ವಿಚಾರಣೆಗೆ ಸುಪ್ರೀಂ ನಕಾರ

ನವದೆಹಲಿ, ಮಾ. 8 – ನ್ಯಾಷನಲ್ ಡಿಫೆನ್ಸ್ ಅಕಾಡೆಮಿ (ಎನ್.ಡಿ.ಎ.)ಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಮೀಸಲಾತಿ ಕಲ್ಪಿಸಬೇಕೆಂಬ ಅರ್ಜಿಯನ್ನು ಸದ್ಯಕ್ಕೆ ವಿಚಾರಣೆ ನಡೆಸಲು ನಿರಾಕರಿಸಿರುವ ಸುಪ್ರೀಂ ಕೋರ್ಟ್, ರಾತ್ರೋ ರಾತ್ರಿ ಸಾಮಾಜಿಕ ಕ್ರಾಂತಿ ಬರುವುದಿಲ್ಲ ಎಂದು ಹೇಳಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಎನ್.ಡಿ.ಎ. ದಲ್ಲಿ ಮೀಸಲಾತಿ ಕಲ್ಪಿಸಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು.

ಈ ಬಗ್ಗೆ ಸದ್ಯಕ್ಕೆ ವಿಚಾರಣೆ ನಡೆಸುವುದಿಲ್ಲ ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ಎಂ.ಎಂ.ಸುಂದರೇಶ್ ಅವರನ್ನು ಒಳಗೊಂಡ ಪೀಠ ಹೇಳಿದೆ. ಆದರೆ, ಇದುವರೆಗೂ ಹುಡುಗರಿಗಷ್ಟೇ ಪ್ರವೇಶ ಇರುವ ಎನ್.ಡಿ.ಎ.ದಲ್ಲಿ (2ನೇ ಪುಟಕ್ಕೆ)

## ಕೆರೆಗಳಿಗೆ ನೀರು ತುಂಬಿಸಲು ಹಂತ ಹಂತವಾಗಿ ಅನುದಾನ

ಬೆಂಗಳೂರು, ಮಾ. 8 - ರಾಜ್ಯದಲ್ಲಿರುವ ಎಲ್ಲ ಕೆರೆಗಳಿಗೆ ನೀರು ತುಂಬಿಸಲು ಕನಿಷ್ಠ ಪಕ್ಷ 1,20,000 ಕೋಟಿ ಅನುದಾನ ಬೇಕಾಗುತ್ತದೆ. ಅನುದಾನದ ಲಭ್ಯತೆ ಮೇಲೆ ಹಂತ ಹಂತವಾಗಿ ಕಾಮಗಾರಿಗಳನ್ನು ಆರಂಭಿಸಲಾಗುವುದು ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ಶಾಸಕ ಭೀಮಾನಾಯ್ಕ್ ಪ್ರಶ್ನೆಗೆ ಉತ್ತರಿಸಿದ ಅವರು, ನಮ್ಮ ಇಲಾಖೆಗೆ ವಾರ್ಷಿಕವಾಗಿ 40 ಸಾವಿರ ಕೋಟಿ ಅನುದಾನವನ್ನೂ ಸಹ ನೀಡುವುದಿಲ್ಲ. ಇನ್ನು ಎಲ್ಲ ಕೆರೆಗಳಿಗೆ ನೀರು ತುಂಬಿಸಲು ಅನುದಾನವನ್ನು ಎಲ್ಲಿಂದ ತರಬೇಕು? ಎಂದು ಪ್ರಶ್ನಿಸಿದರು.

ವಿಜಯನಗರ ಜಿಲ್ಲೆ (3ನೇ ಪುಟಕ್ಕೆ)

## ಪ್ರತಿ ಜಿಲ್ಲೆಯಲ್ಲೂ ಸಾವಿರ ಮಹಿಳಾ ಉದ್ಯಮಿ : ಸಚಿವ

ಬೆಂಗಳೂರು, ಮಾ. 8 - ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ಮುಂದಿನ ಒಂದು ವರ್ಷದಲ್ಲಿ ತಲಾ ಒಂದು ಸಾವಿರ ಮಹಿಳಾ ಉದ್ಯಮಿಗಳನ್ನು ಬೆಳೆಸಲು ಜೀವನೋಪಾಯ ಸಂವರ್ಧನೆ ಇಲಾಖೆಯು ತೀರ್ಮಾನಿಸಿದೆ ಎಂದು ಜೀವನೋಪಾಯ ಇಲಾಖೆ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಬೆಂಗಳೂರು ಉತ್ತರ ಜಿಲ್ಲಾ ಘಟಕವು ಮಲ್ಲೇಶ್ವರಂನ ಚೌಡಯ್ಯ ಭವನದಲ್ಲಿ ಮಂಗಳವಾರ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಅವರು ಮುಖ್ಯ ಅತಿಥಿಯಾಗಿ (2ನೇ ಪುಟಕ್ಕೆ)

## ದೇಶದ ಬದಲಾವಣೆಯ ಮೂಲವೇ ಮಹಿಳೆ

### ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಜಿಲ್ಲಾಧಿಕಾರಿ ಬೀಳಗಿ



ದಾವಣಗೆರೆ, ಮಾ. 8 - ಅಬಲೆ ಎಂಬ ಪದವನ್ನು ನಿಘಂಟಿನಿಂದ ತೆಗೆದು ಹಾಕಬೇಕು. ಯಾವ ರೀತಿಯಿಂದಲೂ ಮಹಿಳೆ ಅಬಲೆಯಲ್ಲ, ಸಬಲೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹೇಳಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ, ಜಿಲ್ಲಾ ಶಾಖೆ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಜಿಲ್ಲಾ ಅಭಿಯಾನ ಘಟಕ, ಜಿಲ್ಲಾ ಪಂಚಾಯತ್, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಸಮಾವೇಶ-2022ರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ನಗರದ ಸರ್ಕಾರಿ ನೌಕರರ ಭವನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮಹಿಳೆಯರು ಇರುವ ಸಂಸ್ಥೆಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತವೆ. ಮನೆ, ಸಮಾಜ ಹಾಗೂ ದೇಶದ ಬದಲಾವಣೆಯ ಮೂಲ ಮಹಿಳೆಯೇ ಆಗಿದ್ದಾಳೆ. ನಮ್ಮದು ಪುರುಷ ಪ್ರಧಾನ ಸಮಾಜ ಎಂದರೂ ಸಹ, ಹೆಣ್ಣಿಲ್ಲದೇ ಯಾವ ಸಾಧನೆಯೂ ಸಾಧ್ಯವಿಲ್ಲ ಎಂದರು.

ಮಗಳಾಗಿ, ಸಹೋದರಿಯಾಗಿ, ಹೆಂಡತಿ, ತಾಯಿ, ಅತ್ತೆ, ಸೊಸೆ ಹೀಗೆ ಹತ್ತು ಹಲವು ಪಾತ್ರಗಳಲ್ಲಿ ಹೆಣ್ಣು ಗುರುತಿಸಿಕೊಳ್ಳುತ್ತಾಳೆ. ಆದರೆ, ಈ ಎಲ್ಲ ಪಾತ್ರಗಳನ್ನು ಮೀರಿ ಸ್ವಂತಿಕೆಯನ್ನು ಕಂಡುಕೊಳ್ಳುವುದೇ ನಿಜವಾದ ಮಹಿಳಾ ದಿನಾಚರಣೆ ಎಂದವರು (3ನೇ ಪುಟಕ್ಕೆ)

### ವೇದಿಕೆ ಮೇಲೆ ಅಧಿಕಾರಿಗಳ ಪತ್ನಿಯರು

**ಮಹಿಳಾ ದಿನಾಚರಣೆಯ ವೇದಿಕೆಯ ಮೇಲೆ ಜಿಲ್ಲಾ ಅಧಿಕಾರಿಗಳ ಪತ್ನಿಯರು ಉಪಸ್ಥಿತರಿದ್ದುದು ವಿಶೇಷವಾಗಿತ್ತು. ಆದರೆ, ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ್, ಉಪ ಮೇಯರ್ ಗಾಯತ್ರಿ ಬಾಯಿ ಹೊರತು ಪಡಿಸಿದರೆ ಜನಪ್ರತಿನಿಧಿಗಳು ಗೈರಾಗಿದ್ದರು. ಈ ಸಂದರ್ಭದಲ್ಲಿ ಪೌಷ್ಟಿಕತೆಯ ಸಂದೇಶ ಸಾರುವ ವಿವಿಧ ತಿನಿಸುಗಳ ಪ್ರದರ್ಶನ ಆಯೋಜಿಸಲಾಗಿತ್ತು. ಮಹಿಳೆಯರು ತಯಾರಿಸಿದ ಉತ್ಪನ್ನ ಹಾಗೂ ಖಾದ್ಯಗಳ ಮಾರಾಟ ಮಳಿಗೆಗಳನ್ನೂ ಅಳವಡಿಸಲಾಗಿತ್ತು.**

## ಗೋವಾ ಜವಾಬ್ದಾರಿ ಡಿಕೆಶಿಗೆ



ಬೆಂಗಳೂರು, ಮಾ. 8 - ಗೋವಾ ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವ ಹೊಣೆಗಾರಿಕೆಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೆಗಲಿಗೆ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಹಾಕಿದ್ದಾರೆ.

ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯಗಳ ವಿಧಾನಸಭೆಗೆ ನಡೆದ ಚುನಾವಣಾ ಮತಗಟ್ಟೆ ಸಮೀಕ್ಷೆಯಲ್ಲಿ ಗೋವಾದಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗಲಿದೆ ಎಂದು ಬಹುತೇಕ ಎಲ್ಲಾ ಸಮೀಕ್ಷೆಗಳು ವರದಿ ಮಾಡಿವೆ. ಆಡಳಿತಾರೂಢ ಬಿಜೆಪಿ ಮತ್ತು ಅಲ್ಲಿನ ಪ್ರತಿಪಕ್ಷ ಕಾಂಗ್ರೆಸ್ ಚುನಾವಣೆಯಲ್ಲಿ ಸಮಬಲ ಪ್ರದರ್ಶಿಸಿದ್ದು, ಯಾರಿಗೂ ಬಹು ಮತ ದೊರೆಯದ ಸ್ಥಿತಿ ನಿರ್ಮಾಣವಾಗಲಿದೆ ಎಂದು ಸಮೀಕ್ಷೆಗಳು ಹೇಳಿವೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಿಜೆಪಿಗಿಂತ ಹೆಚ್ಚು ಸ್ಥಾನ ಗಳಿಸಿದ್ದರೂ ಬಿಜೆಪಿ ನಾಯಕ ಅಮಿತ್ ಷಾ ಅವರ ಚಾಣಾಕ್ಷತನದ ಕಾರಣದಿಂದ ಅಧಿಕಾರದ ಚುಕ್ಕಾಣಿ ಹಿಡಿಯಲು ಸಾಧ್ಯ (3ನೇ ಪುಟಕ್ಕೆ)

## ಮಠದ ಪ್ರಗತಿಯ ತೀವ್ರತೆ ಹೆಚ್ಚಿಸಲು ಬಸವರಾಜನ್ ನೇಮಕ : ಶರಣರು

ಚಿತ್ರದುರ್ಗ, ಮಾ. 8- ರಾಗ, ದ್ವೇಷ ಒಳ್ಳೆಯದಲ್ಲ. ಪರಸ್ಪರ ಪ್ರೀತಿಯಿಂದ ಸಾಧನೆ ಮಾಡಬೇಕಿದೆ. ಇದನ್ನು ಗಮನಿಸಿ ಇದಕ್ಕೆ ಶಾಶ್ವತವಾದ ಇತಿಶ್ರೀ ಹಾಡಬೇಕೆಂದು, ಮಠವನ್ನು ಪ್ರಗತಿ ಹಾದಿಯಲ್ಲಿ ನಡೆಸಬೇಕೆಂದು ತೀರ್ಮಾನಿಸಿ, ಪ್ರಗತಿಯ ತೀವ್ರತೆಯನ್ನು ಹೆಚ್ಚಿಸುವ, ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಎಸ್.ಕೆ. ಬಸವರಾಜನ್ ಅವರನ್ನು ಆಡಳಿತಾಧಿಕಾರಿಯನ್ನಾಗಿ ಹಾಗು ವಿದ್ಯಾಪೀಠಕ್ಕೆ ಗೌರವ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಇಲ್ಲಿನ ಶ್ರೀ ಮಠದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಶರಣರು, ಚಾರಿತ್ರಿಕ ಹಿನ್ನೆಲೆ ಹೊಂದಿರುವ ಮುರುಘಾ ಮಠದಲ್ಲಿ (3ನೇ ಪುಟಕ್ಕೆ)



**ರಾಜಕೀಯಕ್ಕೆ ಹೋಗದೇ ಮುರುಘಾ ಶರಣರ ಆದೇಶದಂತೆ ನಡೆದುಕೊಳ್ಳುತ್ತೇನೆ.**

**- ಎಸ್.ಕೆ.ಬಸವರಾಜನ್**

## ಮಹಿಳೆಯರ ಬೆಳವಣಿಗೆಗೆ ತಕ್ಕಂತೆ ಹಕ್ಕುಗಳು ಸಿಗುತ್ತಿಲ್ಲ

ಹರಿಹರ, ಮಾ. 8 - ಮಹಿಳೆಯರು ಎಲ್ಲಾ ರಂಗಗಳಲ್ಲಿ ಜವಾಬ್ದಾರಿಯುತವಾಗಿ ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿದ್ದರೂ, ಮಹಿಳೆಯರಿಗೆ ಸಮಾಜದಲ್ಲಿ ಹಕ್ಕುಗಳು, ಗೌರವ, ಸ್ಥಾನಮಾನಗಳು ಸರಿಯಾದ ರೀತಿಯಲ್ಲಿ ದೊರೆಯುತ್ತಿಲ್ಲ ಎಂದು ರೈತ ಸಂಘದ ಮುಖಂಡರಾದ ಚುಕ್ಕಿ ನಂಜುಂಡಸ್ವಾಮಿ ಹೇಳಿದರು.

ನಗರದ ಹೆಚ್.ಕೆ. ವೀರಪ್ಪ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಹಸಿರು ಸೇನೆ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಹಾಗೂ ಸಂವಾದ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು.



ಹರಿಹರದಲ್ಲಿ ರಾಜ್ಯ ರೈತ ಸಂಘ, ಹಸಿರು ಸೇನೆ ವತಿಯಿಂದ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಚುಕ್ಕಿ ನಂಜುಂಡಸ್ವಾಮಿ

ಮಹಿಳೆಯರು ಸಮಾಜದಲ್ಲಿ ಕುಟುಂಬದ ನಿರ್ವಹಣೆ, ಸಮಾಜದ ಉನ್ನತಿಗೆ ತೊಡಗಿಸಿಕೊಳ್ಳುವುದು, ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವುದು ಸೇರಿದಂತೆ ಅನೇಕ ರಂಗದಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸಿಕೊಂಡು, ತಮ್ಮ ಕಾರ್ಯವನ್ನು ಮಾಡುತ್ತಾರೆ. ಆದರೆ, ಮಹಿಳೆಯರ ಬೆಳವಣಿಗೆಗೆ ತಕ್ಕಂತೆ ಸಮಾಜದಲ್ಲಿ ಗೌರವ, ಹಕ್ಕುಗಳು, ಸ್ಥಾನಮಾನಗಳು, ಶ್ರಮಕ್ಕೆ ತಕ್ಕಂತೆ ಪ್ರತಿಫಲ ದೊರೆಯುತ್ತಿಲ್ಲ ಎಂದು ವಿಷಾದಿಸಿದರು.

ಕೃಷಿ ಕ್ಷೇತ್ರ ಜಾಗತೀಕರಣದಿಂದ ಬದಲಾಗಿದೆ. ಆದರೆ, ರೈತರ ಸಂಕಷ್ಟಗಳು ಬಹಳ ದೊಡ್ಡಮಟ್ಟದಲ್ಲಿವೆ. ದಿನದಿಂದ ದಿನಕ್ಕೆ ಸಾಲದ ಹೊರೆ ಹೆಚ್ಚಾಗುತ್ತಿದೆ. ಜಮೀನು ಕೆಲಸವನ್ನು ಮಾಡುವ ಪುರುಷರಿಂದ ಹಿಡಿದು ಕುಟುಂಬದ ಸದಸ್ಯರೂ ಸಹಾ ಸಾಲದ ಸುಳಿಯಲ್ಲಿ ಬದುಕುತ್ತಿದ್ದಾರೆ. ಇದನ್ನು ಹೋಗಲಾಡಿಸಲು ಸರ್ಕಾರ ರೈತ ಪರವಾಗಿ ಯೋಜನೆಗಳನ್ನು ರೂಪಿಸಿ, ಅವುಗಳನ್ನು (2ನೇ ಪುಟಕ್ಕೆ)

## ಸಾವಿರಾರು ಜನರ ಜೈಲಿನ ನಂತರ ಕಾಯ್ದೆಗೆ ತಿದ್ದುಪಡಿ

ನವದೆಹಲಿ, ಮಾ. 8 – ಸಾವಿರಾರು ಜನರು ಜೈಲಿನಲ್ಲಿ ಕೊಳೆಯಲು ಕಾರಣವಾಗಿರುವ ಹಾಗೂ ನ್ಯಾಯಿಕ ವ್ಯವಸ್ಥೆ ಕಾರ್ಯನಿರ್ವಹಣೆಗೆ ತೊಡಕಾಗಿರುವ ಕಠಿಣ ಮದ್ಯ ನಿಷೇಧ ಕಾಯ್ದೆಯನ್ನು ಬದಲಿಸುವುದಾಗಿ ಬಿಹಾರ ಸರ್ಕಾರ ತಿಳಿಸಿದೆ. ಶಾಸನಾತ್ಮಕ ಪರಿಣಾಮದ ಅಧ್ಯಯನ ನಡೆಸದೇ ಕಾಯ್ದೆ ಜಾರಿಗೆ ತರಲಾಗಿದೆ. ಪಾಟ್ನಾ ಹೈಕೋರ್ಟ್‌ನ 16 ನ್ಯಾಯಮೂರ್ತಿಗಳು ಜಾಮೀನು ಅರ್ಜಿಗಳ ವಿಲೇವಾರಿಯಲ್ಲೇ ತೊಡಗುವಂತಾಗಿದೆ ಎಂದು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡ ನಂತರ ರಾಜ್ಯ ಸರ್ಕಾರ ಈ ನಿಲುವು ತಿಳಿಸಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ಎ.ಎಂ.ಸುಂದರೇಶ್ ಅವರನ್ನು ಒಳಗೊಂಡ ಪೀಠದ ಎದುರು ಜಾಮೀನು ಅರ್ಜಿಗಳನ್ನು ದಾಖಲಿಸಲಾಗಿತ್ತು. ಕಾಯ್ದೆಯ ಪರಿಣಾಮಗಳ ಕುರಿತು ಅಧ್ಯಯನ ವರದಿ ಸಲ್ಲಿಸುವಂತೆ ನ್ಯಾಯಾಲಯ (2ನೇ ಪುಟಕ್ಕೆ)

## ಸರ್ಕಾರದ ವತಿಯಿಂದ ತಾಲ್ಲೂಕು ಹಂತದಲ್ಲಿಯೇ ನೀಟ್ ಕೋಚಿಂಗ್



ಬೆಂಗಳೂರು, ಮಾ. 8 - ತಾಲ್ಲೂಕು ಹಂತದಲ್ಲಿ ನೀಟ್ ಕೋಚಿಂಗ್ ಅನ್ನು ಸರ್ಕಾರದ ವತಿಯಿಂದಲೇ ಕೊಡಲು ನಿರ್ಧರಿಸಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಸುಧಾಕರ್ ವಿಧಾನಸಭೆಗೆ ಭರವಸೆ ನೀಡಿದರು.

ಶೂನ್ಯವೇಳೆಯಲ್ಲಿ ಶಾಸಕಾಂಗ ಪಕ್ಷದ ಉಪನಾಯಕ ಯು.ಟಿ.ಖಾದರ್ ಮಾಡಿದ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, ವೈದ್ಯಕೀಯ ಶಿಕ್ಷಣದ ನೀತಿಯನ್ನು ಯಾವ ರಾಜ್ಯ ಸರ್ಕಾರಕ್ಕೂ ಮಾಡಲು ಸಾಧ್ಯವಿಲ್ಲ. ಪದವಿ ಹಂತದಲ್ಲಿ ಶೇ.85ರಷ್ಟು ಅಖಿಲ ಭಾರತ ಕೋಟಾದಡಿ ದೊರೆಯುತ್ತದೆ. ಸ್ನಾತಕೋತ್ತರ ಪದವಿಯಲ್ಲಿ ತಲಾ ಶೇ.50ರಷ್ಟು ಸೀಟು ಲಭ್ಯವಾಗಲಿವೆ. ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ಶೇ.50ರಷ್ಟು ಸರ್ಕಾರಿ ಶುಲ್ಕ ನಿಗದಿಯ ಘೋಷಣೆ ಮಾಡುವ ಪ್ರಸ್ತಾವನೆಯನ್ನು ಪ್ರಧಾನಿ ಮಾಡಿದ್ದಾರೆ ಎಂದರು.

ಯುದ್ಧಪೀಡಿತ ಉಕ್ರೇನ್‌ನಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ 20 ಸಾವಿರ ವಿದ್ಯಾರ್ಥಿಗಳಿದ್ದರೆ, ಈಗಾಗಲೇ ಅಲ್ಲಿನ ವಿವಿಧ ನಗರಗಳಿಂದ ವಿದ್ಯಾರ್ಥಿಗಳನ್ನು ತಾಯ್ನಾಡಿಗೆ ಕರೆತರುವ ಪ್ರಯತ್ನ ಮುಂದುವರೆದಿದೆ.

ಉಕ್ರೇನ್‌ನಿಂದ ವಾಪಸ್ಸಾಗಿರುವ ವಿದ್ಯಾರ್ಥಿಗಳ ವೈದ್ಯಕೀಯ ಭವಿಷ್ಯ ಕುರಿತಂತೆ ರಾಜೀವ್‌ಗಾಂಧಿ ಆರೋಗ್ಯ ವಿವಿ ಕುಲಪತಿ, ಡಿಎಂಇ (3ನೇ ಪುಟಕ್ಕೆ)



ಚಿತ್ರ: ರಫೀಕ್, ಜನತಾವಾಣಿ

**ಬೇಸಿಗೆಯ ಆರಂಭದಲ್ಲಿಯೇ ಬಿಸಿಲಿನ ತಾಪಕ್ಕೆ ಜನ ಬೆಚ್ಚಿ ಬೀಳಲಾರಂಭಿಸಿದ್ದಾರೆ. ನೀರನ್ನು ತಂಪಾಗಿರಿಸುವ ಮಣ್ಣಿನ ಮಡಿಕೆಗಳ ಖರೀದಿಗೆ ಜನ ಮುಂದಾಗುತ್ತಿದ್ದಾರೆ. ಒಂದು ಲೀಟರ್ ನೀರು ಕೊಂಡೊಯ್ಯಬಲ್ಲ ವಾಟರ್ ಬಾಟಲ್ ಮಾದರಿಯ ಮಡಿಕೆಗಳೂ ಆಕರ್ಷಿಸುತ್ತಿವೆ. ದಾವಣಗೆರೆಯ ಹದಡಿ ರಸ್ತೆಯಲ್ಲಿ ಮಹಿಳೆ ಮಡಿಕೆ ಮಾರಾಟದಲ್ಲಿ ನಿರತರಾಗಿದ್ದಾರೆ. ಬುಧವಾರ ನಗರದ ಹಲವೆಡೆ ಮಹಿಳಾ ದಿನಾಚರಣೆ ಕಾರ್ಯಕ್ರಮಗಳು ನಡೆಯುತ್ತಿದ್ದರೆ, ಇತ್ತ ಈ ಮಹಿಳೆ ತನ್ನ ಪಾಡಿಗೆ ತಾನು ಕಾಯಕದಲ್ಲಿ ನಿರತರಾಗಿದ್ದರು.**

# ವಿಧಾನಸಭಾ ಚುನಾವಣೆಯಲ್ಲಿ ಮಹಿಳೆಯನ್ನು ಗೆಲ್ಲಿಸಿ



ಹರಪನಹಳ್ಳಿ ಕಾರ್ಯಕ್ರಮದಲ್ಲಿ ನೀಲಗುಂದ ಗುಡ್ಡದ ವಿರಕ್ತ ಮಠದ ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿ ಆಶಯ

ಹರಪನಹಳ್ಳಿ, ಮಾ. 8- ಇಲ್ಲಿಯವರೆಗೂ ಪುರುಷರು ಆಳ್ವಿಕೆ ಮಾಡುತ್ತಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮಹಿಳಾ ಅಭ್ಯರ್ಥಿಯನ್ನು ಗೆಲ್ಲಿಸುವ ಹೊಣೆಗಾರಿಕೆಯನ್ನು ಈ ಮಹಿಳಾ ದಿನಾಚರಣೆ ಮೂಲಕ ಗಟ್ಟಿ ನಿರ್ಧಾರ ತೆಗೆದುಕೊಳ್ಳಲು ಮಹಿಳೆಯರು ಪಣ ತೊಡಬೇಕು ಎಂದು ನೀಲಗುಂದ ಗುಡ್ಡದ ವಿರಕ್ತ ಮಠದ ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿ ಕರೆ ನೀಡಿದ್ದಾರೆ.

ತಾಲ್ಲೂಕಿನ ಬಾಗಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಇಂದು ಏರ್ಪಡಿಸಿದ್ದ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಕಲೆ, ಸಾಂಸ್ಕೃತಿಕ, ಸಾಹಿತ್ಯ, ರಾಜಕೀಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ಎಂ.ಪಿ. ಪ್ರಕಾಶ್ ಅವರ ಯಶಸ್ಸಿನ ಹಿಂದೆ ಒಬ್ಬ ಮಹಿಳೆ ಇದ್ದಾರೆ ಎಂಬುದಕ್ಕೆ ಮಾಜಿ ಉಪಮುಖ್ಯಮಂತ್ರಿ ಎಂ.ಪಿ. ಪ್ರಕಾಶ್ ಅವರ ಪತ್ನಿ ರುದ್ರಾಂಭ ಸಾಕ್ಷಿಯಾಗಿದ್ದಾರೆ. ಇಂದು ಸಮಾಜದಲ್ಲಿ ಉತ್ತಮ ಹೆಸರು ಗಳಿಸಿದ್ದಾರೆ. ಸಮಾಜದಲ್ಲಿ ಬೇರೂರಿದ್ದ ಬಾಲ್ಯ ವಿವಾಹ, ಸತಿ ಸಹಗಮನ, ಮೂಢನಂಬಿಕೆ ಹಾಗೂ ಕಂದಾಚಾರಗಳನ್ನು ಬದಿಗಿಟ್ಟು, ಮಹಿಳೆ ಮುಖ್ಯವಾಹಿನಿಗೆ ಬರಬೇಕಾಗಿದೆ. ಮಕ್ಕಳಿಗೆ ಶಿಕ್ಷಣಕ್ಕಿಂತ ಉತ್ತಮ ಸಂಸ್ಕಾರವಂತರನ್ನಾಗಿ ಮಾಡುವ ಹೊಣೆಗಾರಿಕೆ ಮಹಿಳೆಯರ ಮೇಲಿದೆ ಎಂದರು.

ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ಎಂ.ಪಿ. ವೀಣಾ ಮಹಾಂತೇಶ್ ಮಾತನಾಡಿ, ವೈಜ್ಞಾನಿಕವಾಗಿ ಎಷ್ಟೇ ಮುಂದುವರೆದರೂ ಸಹ ಅತ್ಯಾಚಾರ, ದೌರ್ಜನ್ಯಗಳು ಆಗುತ್ತಿದ್ದು, ಮಹಿಳೆಯರು ಸ್ವ ರಕ್ಷಣೆಗಾಗಿ ಕರಾಟೆ, ಕುಂಗ್‌ಫೂನಂತಹ ಕಲೆಗಳನ್ನು ಕಲಿತುಕೊಳ್ಳಬೇಕಿದೆ. ಮಹಿಳೆ ಪುರುಷರಿಗೆ ಪೈಪೋಟಿಯಲ್ಲಿ ಸಮಾನಳು. ಅಲ್ಪಬುದ್ಧಿಯ ಹೆಣ್ಣು ಎಂದು ಹೀಯಾಳಿಸುವವರಿಗೆ ಸಾಧನೆಯಿಂದ ಸಾಬೀತು ಮಾಡಿರುವ ಮಹಿಳೆ, ಒಲೆಯ ಮುಂದಕ್ಕೆ ಮಾತ್ರ ಸೀಮಿತವಾಗದೇ ವೇದಿಕೆಗೆ ಬರಬೇಕು ಎನ್ನುವ ಉದ್ದೇಶದಿಂದ ಟ್ರಸ್ಟ್ ವತಿಯಿಂದ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದೇವೆ. ಪುರುಷ ಪ್ರಧಾನ ಸಮಾಜದಲ್ಲಿ ಹೊಗಳಿಕೆಯಿಂದ ಮಹಿಳೆಯರನ್ನು ಅಧೋಗತಿಗೆ ತಳ್ಳುವಂತಹ ಸ್ಥಿತಿಯಲ್ಲಿ ಮಹಿಳಾ ದಿನಾಚರಣೆ ಒಂದು ದಿನಕ್ಕೆ ಸೀಮಿತವಾಗದಿರಲಿ ಎಂದು ಆಶಯ ವ್ಯಕ್ತಪಡಿಸಿದರು.

ರುದ್ರಾಂಬ ಎಂ.ಪಿ. ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಪುರಸಭೆ ಮಾಜಿ ಅಧ್ಯಕ್ಷ ಕವಿತಾ ವಾಗೀಶ್, ವೈದ್ಯರಾದ ಡಾ. ನಾಗವೇಣಿ, ಮುಖ್ಯ ಶಿಕ್ಷಕಿ ಸುಭದ್ರಮ್ಮ, ಗಾಯತ್ರಮ್ಮ, ನಿವೃತ್ತ ಕ್ಷೇತ್ರ ದೈಹಿಕ ಶಿಕ್ಷಣಾಧಿಕಾರಿ ಕೆಂಚಮ್ಮ ಟಿ., ನಿವೃತ್ತ ಸೈನಿಕ ಮಂಜಪ್ಪ, ಗ್ರಾ.ಪಂ. ಅಧ್ಯಕ್ಷರಾದ ಕೊಟ್ರಮ್ಮ, ಉಪಾಧ್ಯಕ್ಷರಾದ ಗೀತಮ್ಮ, ಹೆಚ್. ಎಂ. ಲಲಿತಮ್ಮ, ಮಮ್ತಾಜ್ ಬೇಗಂ, ಮಾಲ್ದಾರ್ ಪಾತೀಮಾ ಬೀ, ವೆಂಕಟಮ್ಮ, ಸೂಲಗಿತ್ತಿ ಪೂಜಾರ್ ಹನುಮವ್ವ, ತಾಲ್ಲೂಕು ಯುವ ಕಾಂಗ್ರೆಸ್ ಉಪಾಧ್ಯಕ್ಷ ದಾದಾಪೀರ್, ಬಸವರಾಜ್ ಉಪಸ್ಥಿತರಿದ್ದರು.

## ಜೈಲಿನ ನಂತರ ಕಾಯ್ದೆಗೆ ತಿದ್ದುಪಡಿ

**(1ನೇ ಪುಟದಿಂದ)** ತಿಳಿಸಿತ್ತು. ಬಿಹಾರ ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ರಣಜಿತ್ ಕುಮಾರ್, ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದು ಹೇಳಿದರು.

2016ರಲ್ಲಿ ಕಠಿಣ ಪಾನ ನಿಷೇಧ ಕಾಯ್ದೆ ಜಾರಿಗೆ ತರಲಾಗಿತ್ತು. ಕಾಯ್ದೆಯ ಅನ್ವಯ ರಾಜ್ಯಾದ್ಯಂತ ಮದ್ಯದ ಉತ್ಪಾದನೆ, ಮಾರಾಟ ಹಾಗೂ ಸೇವನೆ ಮೇಲೆ ನಿಷೇಧ ಹೇರಲಾಗಿತ್ತು. ನಿಷೇಧ ಉಲ್ಲಂಘಿಸುವುದನ್ನು ಗಂಭೀರ ಅಪರಾಧವೆಂದು ಪರಿಗಣಿಸಿ ಜೈಲಿಗೆ ಹಾಕಲಾಗುತ್ತಿತ್ತು. ಆರೋಪಿಗಳ ಆಸ್ತಿಯನ್ನೂ ವಶಪಡಿಸಿಕೊಳ್ಳಲಾಗುತ್ತಿತ್ತು. 2018ರಲ್ಲಿ ತಿದ್ದುಪಡಿ ತಂದು ಕಾಯ್ದೆ ಸಡಿಲಿಸಲಾಗಿತ್ತು.

ಕಾಯ್ದೆಯನ್ನು ಸರಿಪಡಿಸಿ, ಇಲ್ಲವಾದರೆ ಸರಿಪಡಿಸುವವರೆಗೆ ಎಲ್ಲಾ ಆರೋಪಿಗಳಿಗೆ ಜಾಮೀನು ನೀಡಲಾಗುವುದು. ಶಾಸನದಿಂದ ಆಗುವ ಪರಿಣಾಮದ ಅಧ್ಯಯನ ಮಾಡದೇ ಜಾರಿಗೆ ತರಲಾಗಿದೆ. ಈ ಕಾಯ್ದೆಯಿಂದ ಆಗುವ ಪರಿಣಾಮಗಳನ್ನು ಎದುರಿಸಲು ಯಾವ ರೀತಿಯ ಸೌಲಭ್ಯಗಳು ಬೇಕು ಎಂಬುದರ ಅಧ್ಯಯನ ನಡೆಸಿಲ್ಲ. ಪ್ರತಿಯೊಂದು ಕಾಯ್ದೆಯಿಂದಲೂ ಖಿಟ್ಲೆಗಳು ಹುಟ್ಟಿಕೊಳ್ಳುತ್ತವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

## ಉಕ್ಕಡಗಾತ್ರಿ : ಸಂಭ್ರಮದ ಬೆಳ್ಳಿ ರಥೋತ್ಸವ, ಪಾಲಿಕೋತ್ಸವ





ಮಲೇಬೆನ್ನೂರು, ಮಾ.8- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಶಿವರಾತ್ರಿ ಜಾತ್ರಾ ಮಹೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ ಬೆಳ್ಳಿ ರಥೋತ್ಸವ, ರಾತ್ರಿ ಪಾಲಿಕೋತ್ಸವ ಸಂಭ್ರಮದಿಂದ ಜರುಗಿದವು. ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಉತ್ಸವದಲ್ಲಿ ಭಾಗವಹಿಸಿದ್ದರು. ಪಾಲಿಕೋತ್ಸವದ ವೇಳೆ ಪಟಾಕಿ ಸಿಡಿತ ಬಾನಂಗಳದಲ್ಲಿ ಬಣ್ಣ ಬಣ್ಣದ ಚಿತ್ತಾರ ಮೂಡಿಸಿ ಎಲ್ಲರ ಗಮನ ಸೆಳೆದವು.

ಬುಧವಾರ ಬೆಳಿಗ್ಗೆ ಪೂಜೆಯ ನಂತರ ಭಕ್ತರಿಗೆ ಅಜ್ಜಯ್ಯನ ಫಳಾರ ಹಂಚುವ ಮೂಲಕ ಜಾತ್ರೆಗೆ ತೆರೆ ಬೀಳಲಿದೆ.

## ನೀರು ತುಂಬಿಸಲು ಅನುದಾನ

**(1ನೇ ಪುಟದಿಂದ)** ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ 10 ಕೆರೆಗಳಿಗೆ ನೀರು ತುಂಬಿಸಲು 85 ಕೋಟಿ ವೆಚ್ಚದಲ್ಲಿ ಯೋಜನೆಯನ್ನು ಸಿದ್ದಪಡಿಸಲಾಗಿತ್ತು. ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ನೀರನ್ನು ಕೊಟ್ಟರೂ ಇತರೆ 11 ಕೆರೆಗಳಿಗೆ ತುಂಬಿಸಲು ಬಜೆಟ್‌ನಲ್ಲಿ ಅನುಮೋದಿಸಲಾಗಿತ್ತು. ಆದರೆ ಇದಕ್ಕೆ ಆಡಳಿತಾತ್ಮಕ ಅನುದಾನ ಕೊಟ್ಟಿಲ್ಲ ಎಂದು ಸ್ಪಷ್ಟಪಡಿಸಿದರು.

ಈಗ ನಮ್ಮ ಸರ್ಕಾರ ಇದನ್ನು ಕೈಗೆತ್ತಿಕೊಂಡಿದ್ದು, ಅಂದಾಜು 389 ಕೋಟಿ ಬೇಕಾಗುತ್ತದೆ. 379 ಕೋಟಿ ಮೊತ್ತದ ವಿಸ್ತೃತ ಯೋಜನೆಯನ್ನು ಸಿದ್ದಪಡಿಸಿ ಕರ್ನಾಟಕ ನೀರಾವರಿ ಅಂದಾಜು ಸಮಿತಿಗೆ ಕಳುಹಿಸಲಾಗಿದೆ. ಸಮಿತಿ ನೀಡುವ ವರದಿ ಹಾಗೂ ಹಣಕಾಸು ಲಭ್ಯತೆ ನೋಡಿಕೊಂಡು ಕಾಮಗಾರಿಯನ್ನು ಆರಂಭಿಸಲಾಗುವುದು ಎಂದು ತಿಳಿಸಿದರು.

## ಮಹಿಳೆಯರ ಬೆಳವಣಿಗೆಗೆ ತಕ್ಕಂತೆ ಹಕ್ಕುಗಳು ಸಿಗುತ್ತಿಲ್ಲ

**(1ನೇ ಪುಟದಿಂದ)** ಸರಿಯಾದ ರೀತಿಯಲ್ಲಿ ಅನುಷ್ಠಾನಕ್ಕೆ ತರುವುದಕ್ಕೆ ಮುಂದಾಗಬೇಕಾಗಿದೆ ಎಂದು ಹೇಳಿದರು.

ಸಂಘಟನೆ ಗಟ್ಟಿಯಾಗಿ ಇದ್ದರೆ ರೈತ ಕುಟುಂಬದ ಯಾವುದೇ ಸಮಸ್ಯೆಗಳು ಬಂದಾಗ ಹೋರಾಟದ ಮೂಲಕ ನಮ್ಮ ಹಕ್ಕು ಮತ್ತು ಗೌರವ ಪಡೆಯಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಗ್ರಾಮದಲ್ಲಿ ಸಂಘಟನಾ ಶಕ್ತಿಯನ್ನು ಹೆಚ್ಚಿಸಬೇಕು ಎಂದು ಹೇಳಿದರು.

ರಾಮನಗರದ ಹಿರಿಯ ರೈತ ಮಹಿಳಾ ಮುಖಂಡರಾದ ಅನಸೂಯಮ್ಮ ಮಾತನಾಡಿ, ಕೃಷಿ ಕ್ಷೇತ್ರವನ್ನು ಕಂಡುಹಿಡಿದವರು ಮಹಿಳೆಯರು. ಪುರುಷರು ಮನೆಯಲ್ಲಿ ಜೀವನ ನಡೆಸುವುದಕ್ಕೆ, ಬೇಟೆಯಾಡಲು ಕಾಡಿಗೆ ಹೋದ ಸಮಯದಲ್ಲಿ ಮಹಿಳೆಯರು ಕುರಿ, ಕೋಳಿ, ರೇಷ್ಮೆ ಸೇರಿದಂತೆ ಹಲವಾರು ವಿಧಾನದ ಮೂಲಕ ಕೃಷಿ ಕೆಲಸಕ್ಕೆ ಮುಂದಾದರು. ಇದು ಕ್ರಮೇಣ ಹೆಚ್ಚಾಗುತ್ತಿದ್ದಂತೆ, ಪುರುಷರು ಇದನ್ನು ನಿಭಾಯಿಸಲು ಮುಂದಾದರು ಎಂದು ಹೇಳಿದರು. ಆದರೆ, ಇದುವರೆಗೂ ಸಹ ಮಹಿಳೆಯರು ಪುರುಷರಿಗೆ ಸಮಕಾಲೀನರು ಎಂದು ಯಾರೂ ಕರೆಯುತ್ತಿಲ್ಲ. ಹಗಲು, ರಾತ್ರಿ ಎನ್ನದೆ ಶ್ರಮ ವಹಿಸಿ ಕೆಲಸ ಮಾಡುವ ಮಹಿಳೆಯರಿಗೆ ಸರಿಯಾದ ಪ್ರೋತ್ಸಾಹ ಸಿಗುತ್ತಿಲ್ಲ ಎಂದು ವಿಷಾದಿಸಿದರು.

ಈ ಸಂದರ್ಭದಲ್ಲಿ ಕೋಲಾರದ ನಳಿನಿಗೌಡ, ದಾವಣಗೆರೆ ಸುನಿತಾ ಶಂಕರಗೌಡ, ಸರೋಜಮ್ಮ, ಮಂಡ್ಯ ನಂದಿನಿ ಜಯರಾಮ್, ಬೈಲಹೊಂಗಲ ಸುರೇಖಾ ಕಂಬೋಜಿ, ಬೆಳಗಾವಿ ಪಾರ್ವತಿ, ರೇಖಾ, ಸುರೇಶ್ ಬಾಬು ಪಾಟೀಲ್, ಕೆ.ಟಿ. ಗಂಗಾಧರ್, ರಾಮಣ್ಣ, ಮಲ್ಲಿಕಾರ್ಜುನ ಬಳ್ಳಾರಿ, ತಾಪಂ ಸ್ಥಾಯಿ ಸಮಿತಿಯ ಮಾಜಿ ಅಧ್ಯಕ್ಷ ಕೆ.ಜಿ. ಸಿರಿಗೆರೆ ಕೊಟ್ರೇಶ್, ನಂದಿತಾವರೆ ಶಂಭುಲಿಂಗಪ್ಪ, ನಂದಿತಾವರೆ ನಂದೀಶ, ಭಾನುವಳ್ಳಿ ಕೊಟ್ರೇಶ್, ಮಹೇಶಪ್ಪ ದೊಗ್ಗಳಿ, ಗರಡಿಮನೆ ಬಸವರಾಜ್ ಉಪಸ್ಥಿತರಿದ್ದರು.

## ರಾಣೇಬೆನ್ನೂರು : ವಿದ್ಯುತ್ ವ್ಯತ್ಯಯ

ಮುದೇನೂರು, ಕುಪ್ಪೇಲೂರು, ಹಲಗೇರಿ, ಸುಣಕಲ್ಲಬಿದರಿ ಹಾಗೂ ಸುತ್ತ ಮುತ್ತಲ ಗ್ರಾಮಗಳಲ್ಲಿ ಇಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

## ಪುಟ್ಟಮ್ಮಗೆ ಬನ್ನಯ್ಯ ಸ್ವಾಮಿ ಶೋಕ

ದಾವಣಗೆರೆ,ಮಾ.8- ಸಾಮಾಜಿಕ ಸೇವಾ ಕಾರ್ಯಕರ್ತರಾದ ಶ್ರೀಮತಿ ಪುಟ್ಟಮ್ಮ ಮಹಾರುದ್ರಯ್ಯ ಅವರ ನಿಧನಕ್ಕೆ ಜಿಲ್ಲಾ ವೀರಶೈವ ಜಂಗಮ ಅರ್ಚಕ ಪುರೋಹಿತರ ಸಂಘದ ಅಧ್ಯಕ್ಷ ಎಂ. ಬನ್ನಯ್ಯ ಸ್ವಾಮಿ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

## ಚಳಗೇರಿಗೆ ಇಂದು ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ

ರಷ್ಯಾ-ಉಕ್ರೇನ್ ಸಂಘರ್ಷದಲ್ಲಿ ಮೃತನಾದ ರಾಣೇಬೆನ್ನೂರು ತಾಲ್ಲೂಕಿನ ಚಳಗೇರಿ ವೈದ್ಯಕೀಯ ವಿದ್ಯಾರ್ಥಿ ನವೀನ್ ಗ್ಯಾನ್ ಗೌಡ್ರ ಮನೆಗೆ ಭೇಟಿ ನೀಡಿ, ಮೃತ ನವೀನ್ ಕುಟುಂಬದವರಿಗೆ ಸಾಂತ್ವನ ಹೇಳಲು ವಿರೋಧ ಪಕ್ಷದ ನಾಯಕ ಸಿದ್ರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಇಂದು ಚಳಗೇರಿಗೆ ಆಗಮಿಸುವರು. ವಿಧಾನಸಭಾ ಮಾಜಿ ಅಧ್ಯಕ್ಷ ಕೆ.ಬಿ. ಕೋಳಿವಾಡ ಜೊತೆಗಿರುವರು.

## ಅರ್ಜಿ ವಿಚಾರಣೆಗೆ ನಕಾರ

**(1ನೇ ಪುಟದಿಂದ)** ಮಹಿಳಾ ಪ್ರವೇಶದ ವಿಷಯ ಪರಿಶೀಲಿಸುವುದಾಗಿ ನ್ಯಾಯಾಲಯ ಹೇಳಿದೆ. ಈ ಕುರಿತ ವಿಚಾರಣೆಯನ್ನು ಜುಲೈ 19ಕ್ಕೆ ನಿಗದಿ ಪಡಿಸಿರುವ ನ್ಯಾಯಾಲಯ, ಮಹಿಳಾ ಸೇರ್ಪಡೆ ಕುರಿತು ನಡೆಸಲಾದ ಅಧ್ಯಯನದ ವಿವರ ಕೇಳಿದೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**REQUIRED**
Lady Car Driver
Cum
Office Attendant
94488 86026

**ಸೈಟು ಮಾರಾಟಕ್ಕಿವೆ**
ಬಾಲಾಜಿ ಲೇಔಟ್‌ನಲ್ಲಿ 30x50 ಉತ್ತರ, ಡಾಲರ್ಸ್ ಕಾಲೋನಿಯಲ್ಲಿ 30x50 ಪಶ್ಚಿಮ ಅಕ್ಕ-ಪಕ್ಕ, ಹೊಸ ಬನಶಂಕರಿ ಬಡಾವಣೆಯಲ್ಲಿ 30x50 ಪೂರ್ವ, ದಕ್ಷಿಣ, 30x40 ಪಶ್ಚಿಮ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಸುವರ್ಣಾವಕಾಶ**
ಯಾವುದೇ ಬಂಡವಾಳ ಇಲ್ಲದೇ ಮೋದಿ ಕೇರ್ ನಲ್ಲಿ ಹೊಸಪ್ಲಾನ್ ಪ್ರಕಾರ ವಿದ್ಯಾರ್ಥಿಗಳು, ಗೃಹಿಣಿಯರು ಉದ್ಯೋಗ ಮಾಡುವವರು, ನಿರುದ್ಯೋಗಿಗಳು, ನಿವೃತ್ತಿ ಹೊಂದಿದವರು, ಪಾರ್ಟ್ ಟೈಮ್ ಹಾಗೂ ಫುಲ್ ಟೈಂ ನಲ್ಲಿ 10 ರಿಂದ 15 ಸಾವಿರ ಗಳಿಸಬಹುದು ಮತ್ತು ಡಿಸ್ಟ್ರಿಬ್ಯೂಟರ್ ಬೇಕಾಗಿದ್ದಾರೆ. ಸಂಪರ್ಕಿಸಿ :
7259222590 7353268518

**ಬೇಕಾಗಿದ್ದಾರೆ**
ಸೌತ್ ಅಡುಗೆ & ದೋಸೆ ಭಟ್ಟರು ಬೇಕಾಗಿದ್ದಾರೆ.
ಸಂಪರ್ಕಿಸಿ
90601 72745

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದ ಪುರುಷ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**ಮನೆ ಬಾಡಿಗೆಗೆ ಇದೆ**
2BHK ಮೊದಲನೆ ಮಹಡಿ, ಬೋರ್‌ವೆಲ್ & ಕಾರ್ಪೋರೇಷನ್ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸ್ ಬಡಾವಣೆ 'ಬಿ' ಬ್ಲಾಕ್ 1ನೇ ಮುಖ್ಯರಸ್ತೆ, 11ನೇ ಕ್ರಾಸ್ ನಂ 353 'ಸಿರಿಸಾರ' ಉತ್ತರ ದಿಕ್ಕಿಗೆ ಬಾಗಿಲಿರುವ ಮನೆ ಬಾಡಿಗೆಗೆ ದೊರೆಯುತ್ತದೆ. ವಿಚಾರಿಸಿ
94489 63300

**ಬೇಕಾಗಿದ್ದಾರೆ**
Wanted Full Time Car Driver
Car Type - Innova
Work timings : 10 Am to 8 Pm
Address : Hi-Tech or S.S. Hospital Near
83102 57998

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ 30x40 west, 30x57 East, 40 ಅಡಿ ರೋಡ್‌ಗಿದೆ. 30x50 West, 30x50, 30x50 South ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಾಡಿಗೆಗೆ ಇದೆ**
ಮಳಿಗೆ ಮನೆ ಆಫೀಸ್‌ಗೆ ಮತ್ತು ಗೋಡೌನ್‌ಗೆ ವಿದ್ಯಾರ್ಥಿ ಭವನ ಸರ್ಕಲ್ ಮತ್ತು ವಸಂತ ರೋಡ್ ಹತ್ತಿರ ಮತ್ತು ಎಂ.ಬಿ. ಕೇರಿಯಲ್ಲಿ ಮನೆ ಮಾರಾಟಕ್ಕಿದೆ.
72043 06065

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ Delivery Boy ಆಗಿ ಕೆಲಸ ಮಾಡಲು ಬೈಕ್ ಇರುವಂತಹ ಹುಡುಗರು ಬೇಕಾಗಿದ್ದಾರೆ.
Age: 18 ರಿಂದ 28 ವರ್ಷ
9738523711

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ ಶಾಖೆಯಲ್ಲಿ ರಿಕವರಿ & ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ.
ಶಿವಸಂಗಮ ಚಿಟ್ಸ್ ಪ್ರೈ.ಲಿ. ಶಿವಸಂಗಮ ಫೈನಾನ್ಸ್ (ರಿ.)
ಸ್ಥಳ : ಡಾ. ಬಿ.ಆರ್. ಶಿವಶಂಕರ ನಾಗರತ್ನಮ್ಮ ಸಂಕೀರ್ಣ, 4 ನೇ ಮೇನ್, ಪಿ.ಜೆ. ಬಡಾವಣೆ, ರಾಂ ಅಂಡ್ ಕೋ ಸರ್ಕಲ್ ಹತ್ತಿರ ದಾವಣಗೆರೆ.
81972 20933

**ಬೇಕಾಗಿದ್ದಾರೆ**
ಮಂಡಿಪೇಟೆಯ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ನ್ಯೂ ನಯನ ಫರ್ನೀಚರ್ಸ್ ಮಂಡಿಪೇಟೆ, ದಾವಣಗೆರೆ.
99017 16310

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ತಾಲ್ಲೂಕು, ಕಬ್ಬೂರಿನಿಂದ ನಂದಿಗೇನಹಳ್ಳಿಗೆ ಹೋಗುವ ರಸ್ತೆಗೆ ಹೊಂದಿ ಕೊಂಡಿರುವ 1 ಎಕರೆ ಜಮೀನು ಮಾರಾಟಕ್ಕಿದೆ. ಆಸಕ್ತರು ವಿಚಾರಿಸಿ
M: 99452 72061

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**Required**
Accounting and Computer knowledge is required, 94823 69274 within 13.3.2022. Experienced Candidates may also appply for bright future. Resume may upload in mail id : vs.arunachal@rediffmail.com

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ. ಅನುಭವವುಳ್ಳ ನುರಿತ A.N.M ಮತ್ತು G.N.M. ಆದವರು ಮತ್ತು ಆಯಾಗಳು ಬೇಕಾಗಿದ್ದಾರೆ. ಈ ಕೆಳಗಿನ ಮೊಬೈಲ್ ನಂಬರ್‌ಗೆ ತಮ್ಮ ಬಯೋಡಾಟಾದೊಂದಿಗೆ ಸಂಪರ್ಕಿಸಿ.
M: 98450 35710

**ಸೈಟು ಮಾರಾಟಕ್ಕಿದೆ**
ಸಿದ್ದವೀರಪ್ಪ ಬಡಾವಣೆಯಲ್ಲಿ ಪೂರ್ವ ಹಾಗೂ ಪಶ್ಚಿಮ ಎರಡೂ ಕಡೆ ರಸ್ತೆ ಇರುವ 5000 sq.ft ಸೈಟು ಮಾರಾಟಕ್ಕಿದೆ.
(Rate 4600 per Sq,Ft)
Real Estate Agent
86181 82332

**Required**
Chemist, Micro Biologist, Production Manager, Store Keeper, Accounts Officer (Exeprience of minimum 2 years) Shamanur Pharma & Health care Pvt Ltd., No. 374, 4th Main, P.J.Exttension, Davanagere.
98441 20003

**GST Registration**
INCOME TAX cases, Audit and for Account Maintenances
MEGHANA ASSOCIATES (R)
99809 16126

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆಯ ಎಪಿಎಂಸಿ ರಸ್ತೆಯಲ್ಲಿರುವ PRO- MART ENTERPRISES ನ ವೇರ್ ಹೌಸ್ ನಲ್ಲಿ ಕೆಲಸ ಮಾಡಲು ಒಬ್ಬರು ಅಕೌಂಟೆಂಟ್ (ಬಿ.ಕಾಂ ಓದಿರಬೇಕು, ಕಂಪ್ಯೂಟರ್ ಜ್ಞಾನವಿರಬೇಕು), ಮೂವರು ಡ್ರೈವರ್ ಸಹಾಯಕರು (ಎಸ್ ಎಸ್ ಎಲ್ ಸಿ ಓದಿರಬೇಕು) ಬೇಕಾಗಿದ್ದಾರೆ.
99162 79505

**ಸಂಘ-ಸಂಸ್ಥೆಗಳ**
ಬೈಲಾ ನೋಂದಣಿ, ನವೀಕರಣ ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ.
MEGHANA ASSOCIATES. (R)
99809 16126

**ಸಂಘ-ಸಂಸ್ಥೆ, NGO, ಟ್ರಸ್ಟ್‌ಗಳ**
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**ಸೈಟುಗಳು ಮಾರಾಟಕ್ಕಿವೆ**
ಹರಿಹರದಲ್ಲಿ ವಿನಾಯಕ ನಗರ, ಮಹಜೇನಹಳ್ಳಿ ತಾಂಡಾದ ಹತ್ತಿರ ಕಡಿಮೆ ಬೆಲೆಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ.
ಮೋಹನ್ ರಿಯಲ್, ಎಸ್ಟೇಟ್ ಏಜೆನ್ಸೀಸ್
ಫೋ. : 97424 34049

**ಕೆಲಸಕ್ಕೆ ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಗೆ ಕೆಲಸಕ್ಕೆ ಬೇಕಾಗಿದ್ದಾರೆ.
ಫೋ. : 77602 68105

**ಕೆಲಸಕ್ಕೆ ಬೇಕಾಗಿದ್ದಾರೆ**
ನಮ್ಮ ಅಜಂತಾ ಡಿಪೋಟ್‌ಗೆ ಹುಡುಗ ಮತ್ತು ಹುಡುಗಿಯರು ಬೇಕಾಗಿದ್ದಾರೆ.
97405 41846
08192 236362

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಸೆಕ್ಯೂರಿಟಿ ಬೇಕಾಗಿದ್ದಾರೆ. ಸಂಬಳ 9000 ರೂ. ಊಟ, ರೂಂ ಉಚಿತ.
97400 98064
97400 98047

**ಮನೆ ಬಾಡಿಗೆಗೆ ಇದೆ**
ಜಯನಗರದಲ್ಲಿ 15x40 ವಿಸ್ತೀರ್ಣದ ಮೊದಲ ಮಹಡಿ ಪೂರ್ವ ದಿಕ್ಕಿನಲ್ಲಿರುವ ಮನೆ ಬಾಡಿಗೆಗೆ ಹಾಗೂ ಚಿಕ್ಕ ಮನೆಗಳು ಬಾಡಿಗೆಗೆ ದೊರೆಯುತ್ತವೆ.
94484 39639

**ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್- 1, ಸೂಪರ್‌ವೈಸರ್-1, ರೂಂ ಬಾಯ್- 1, 40 ವರ್ಷ ಮೇಲ್ಪಟ್ಟವರಿಗೆ ಆದ್ಯತೆ.
87924 71589

**CAR WANTED**
Good Condition, Year 2018 Model, Auto Translation And Manual Car, Any Comapany
Doggalli Dayanand
82177 14090
79755 93275

**English class**
1st Std to 9th std
Bruit Abacus and Vedic Maths
Nijalingappa badavane
96201 53806

**ಈಶ್ವರಿ ತರಬೇತಿ ಕೇಂದ್ರ**
ಫ್ಯಾಷನ್ ಡಿಸೈನಿಂಗ್ & ಟೈಲರಿಂಗ್ ಕೋರ್ಸ್
ಸಮಯ: ಬೆಳಿಗ್ಗೆ 10 ರಿಂದ 3ರವರೆಗೆ
ಕ್ರೋಶಾ ಕುಚ್ಚು ಮತ್ತು ಸ್ಯಾರಿ ಕುಚ್ಚು ತರಬೇತಿ ಕೊಡಲಾಗುವುದು.
97316 50435
95358 15543

**PRINCE COLLEGE**
DAVANGERE
SSLC, PUC, BA, B.Com, B.Sc, M.A, M.Com, M.Sc, B.Lib, B.Lisc, M.B.A, M.C.A, LL.B, Diploma, B.Tech., D. Farm & All Courses
77609 55550, 96200 28627

**ಬೇಕಾಗಿದ್ದಾರೆ**
ಬೆಂಗಳೂರು, ಮೈಸೂರು, ಮಂಗಳೂರಿನಲ್ಲಿ ವೃದ್ದರು ರೋಗಿಗಳನ್ನು ಆರೈಕೆ ಮಾಡಲು ಯುವಕ / ಯುವತಿಯರು, ಮಹಿಳೆಯರು, ವಿಧವೆ /ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ಬೇಕಾಗಿದ್ದಾರೆ. (ಯಾವುದೇ ರೀತಿಯ ಶುಲ್ಕ ಇರುವುದಿಲ್ಲ) ಸಂಬಳ, ಉಚಿತ ಊಟ, ವಸತಿ, ತರಬೇತಿಯೊಂದಿಗೆ 12000 ರಿಂದ 16000 ವರೆಗೆ
74116 14209

**ಮನೆ ಬಾಡಿಗೆಗೆ ಇದೆ**
ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್ 'ಲಲಿತ ನಿಲಯ' #5628/C-18, 4ನೇ ಮೇನ್, 7 ನೇ ಕ್ರಾಸ್ ಮೊದಲನೇ ಮಹಡಿಯಲ್ಲಿ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸೋಲಾರ್, ಬೋರ್ ಹಾಗೂ ಕಾರ್ಪೋರೇಷನ್ ನೀರಿನ ಸೌಲಭ್ಯವಿದೆ.
90084 18081

**2 BHK ಮನೆ ಲೀಸ್‌ಗಿದೆ**
#1197, 5ನೇ ಮೇನ್, ಎ ಬ್ಲಾಕ್, ನಿಜಲಿಂಗಪ್ಪ ಬಡಾವಣೆ, ನ್ಯಾಷನಲ್ ಕಾನ್ವೆಂಟ್ ಸ್ಕೂಲ್ ಹತ್ತಿರ, ದಾವಣಗೆರೆ-4. ದಕ್ಷಿಣ ದಿಕ್ಕು
ಫೋ. : 92422 45311

**ಮನೆ ಬಾಡಿಗೆಗೆ**
1ನೇ ಫ್ಲೋರ್‌ನಲ್ಲಿ, 3 ಬೆಡ್ ರೂಂ ಹಾಗೂ 2 ಬೆಡ್ ರೂಂ, ಹೊಸ ಮನೆ ವಿಳಾಸ : ಸಿದ್ಧವೀರಪ್ಪ ಬಡಾವಣೆ, 8 ನೇ ಕ್ರಾಸ್, ಡೋ. ನಂ. 1663/1-2, ಕಲ್ಪವೃಕ್ಷ, ದಾವಣಗೆರೆ.
ಸಂಪರ್ಕಿಸಿರಿ : 70198 78789
(Pets Not Allowed)

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000

**ಆಸ್ತಿಗಳ ವಿಭಾಗಕ್ಕೆ**
ನಿಮ್ಮ ಒಟ್ಟು ಕುಟುಂಬದ ಆಸ್ತಿಗಳಲ್ಲಿ ನಿಮಗೆ ಬರಬೇಕಾದ ಭಾಗದ ಆಸ್ತಿಗೆ ನ್ಯಾಯಾಲಯದಿಂದ ಪ್ರತ್ಯೇಕ ಡಿಕ್ರಿ ಮತ್ತು ಸ್ವಾಧೀನ ಆದೇಶ ಪಡೆಯಲು ಸಂಪರ್ಕಿಸಿ.
ಹೊನ್ನೂರಸ್ವಾಮಿ ವಾಂಜ್ರೆ
ಫೋ. : 87926 04196

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 84769 49581

**ಕುರಿಗಳು ಮಾರಾಟಕ್ಕಿವೆ**
ಶ್ರೀ -ಮಾರುತಿ ಕುರಿ ಸಾಕಾಣಿಕೆ ಕೇಂದ್ರ
ನಮ್ಮಲ್ಲಿ ಉತ್ತಮವಾಗಿ ಸಾಕಿದ ಆರೋಗ್ಯಕರ ನಾಟಿ ಟಗರುಗಳು ಸಿಗುತ್ತವೆ. ದಾವಣಗೆರೆಯಿಂದ ಕೇವಲ 4 ಕಿ.ಮೀ. ಐಗೂರು ರಸ್ತೆ.
ಸಂಪರ್ಕಿಸಿ 70196 02944
94807 46013

**ಬೇಕಾಗಿದ್ದಾರೆ**
ನುರಿತ ITI ಆಗಿರುವವರು ಮತ್ತು ಕಂಪ್ಯೂಟರ್ ಆಪರೇಟರ್, ಟ್ಯಾಲಿ, ಡಿಟಿಪಿ ಅನುಭವವುಳ್ಳವರು, ಹಾಗೂ ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ. ಪ್ಲೋವ್ ಮ್ಯಾನ್ ಟ್ರ್ಯಾಕ್ಟರ್ (ವಿ.ಎಸ್.ಟಿ. ಶಕ್ತಿ) ಲೋಕಿಕೆರೆ ರಸ್ತೆ, ಚೌಡಮ್ಮ ದೇವಸ್ಥಾನದ ಹತ್ತಿರ, ಇಂಡಸ್ಟ್ರೀಯಲ್ ಏರಿಯಾ. ದಾವಣಗೆರೆ.
78999 12347, 93410 12025

**Join skating...**
skating skating
Admission open for skating classes in Davanagere.
Skater Available @ Best price in STAR SPORTS, Davanagere
83101 54195, 99649 53137

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ನಿಮ್ಮ ಆಸ್ತಿ ಉಯಿಲು/ವಿಲ್**
ನೀವು ಸ್ವಯಾರ್ಜಿತವಾಗಿ ಗಳಿಸಿ ನಿಮ್ಮ ಹೆಸರಿಗೆ ಮಾತ್ರ ಇರತಕ್ಕ ಮನೆ, ಸೈಟು, ಜಮೀನುಗಳು ನಿಮ್ಮ ಕುಟುಂಬದ ಸದಸ್ಯರಿಗೆ ಸುರಕ್ಷಿತವಾಗಿರಲು ಉಯಿಲು, ವಿಲ್ ಮಾಡಲು ಸಂಪರ್ಕಿಸಿರಿ.
ಹೊನ್ನೂರಸ್ವಾಮಿ ವಾಂಜ್ರೆ
ಫೋ. : 87926 04196

**SBI Life Insurance**
ಕಂಪನಿಯಲ್ಲಿ ವಿಮಾ ಪ್ರತಿನಿಧಿಗಳ ಆಯ್ಕೆ ನಡೆಯುತ್ತಿದೆ. ವಿದ್ಯಾರ್ಹತೆ : ಪದವಿ/ಪಿಯುಸಿ/SSLC ಸೌಲಭ್ಯಗಳು: ತಿಂಗಳಿಗೆ ರೂ. 10,000, ಪೆನ್ಷನ್, ಆಕರ್ಷಕ ಕಮೀಷನ್, ಉಚಿತ ಆರೋಗ್ಯವಿಮೆ, ಉತ್ತಮ ಆದಾಯ ಗಳಿಸುವ ಸುವರ್ಣಾವಕಾಶ. ನಿವೃತ್ತ ನೌಕರರು, ಪಿಗ್ನಿ ಏಜೆಂಟರು, ಶಿಕ್ಷಕರು, ಗೃಹಿಣಿಯರು, ಸೇಲ್ಸ್ ಎಕ್ಸಿಕ್ಯೂಟಿವ್.
Ravikumar.M.G. Agency
Manager SBI Life Insurance
95358 10209

**WANTED**
Accounts Officer Post, B.Com Graduate with Tally and Excell Word, Power Point Knowledge. 3.5 year, Experience male Candidate.
Venkateshwara Pipes Industries
RN Agriseeds Pvt., Ltd., Davangere.
Ph. : 93411 80972

**Job offer**
Post : Assistant/Labour Work environment: Warehouse @ Davangere Salary: 10,000 to 14,000. ESI, EPF, BONUS, GRATUITY AVAILABLE. EDUCATION: SSLC ,PUC with ENGLISH READING KNOWLEDGE. Experience: 0 TO 1YR ( FMCG or Warehouse operations) Should be flexible with timings
98865 78122

**WANTED**
Banking Sector tele caller (Female Only)
Qualification - Any Degree/PUC
No.2257/5 2nd Floor, M.C.C 'A' Block Beside Togataveera Kalyana Manatapa
96630 72555
Interview time : 11 AM

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**Required for**
NOKIA Godrej
SALESMAN
LADIES FOR OFFICE WORK
Age limit: 22 years, Qul : SSLC
Preferably Davangere Candidates attractive salary
Jain Enterprises
Chowkipet Chigateri Galli, Back side to old BSC., Opp Axis Bank, Davangere - 01
98445 55551
98445 09222

**ಹೆಸರು ಬದಲಾವಣೆ**
ಹುಬ್ಬಳ್ಳಿ, ವೆಂಕಟೇಶ್ವರ ನಗರದ ವಾಸಿಯಾದ ಸಂಗಮೇಶ ನಾಡಗೌಡರ್ ಎಂಬ ನಾನು ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ ನನ್ನ ಮಗಳ ಹೆಸರು ಜನನ ದಾಖಲೆಯಲ್ಲಿ ಲಿಖಿತಾ ಎಸ್.ನಾಡಗೌಡರ್ ಎಂದು ಹಾಗೂ ನನ್ನ ಪತ್ನಿಯ ಹೆಸರು ವೈ.ಕೆ. ಶೃತಿಯೆಂದು ತಪ್ಪಾಗಿ ನಮೂದಾಗಿದ್ದು, ದಿನಾಂಕ 8.3.2022 ರಂದು ದಾವಣಗೆರೆ ನೋಟರಿಯವರ ಸಮ್ಮುಖದಲ್ಲಿ ಮಗಳ ಹೆಸರನ್ನು ಸಾನ್ವಿಕ ಎಸ್.ನಾಡಗೌಡರ್ ಮತ್ತು ಪತ್ನಿ ಹೆಸರನ್ನು ಶೃತಿ ಎಸ್. ನಾಡಗೌಡರ್ ಎಂದು ಬದಲಾಯಿಸುರುತ್ತೇವೆ.

**WANTED**
Service Works Manager
- Excellent Interpersonal & communication skills.
- Superior product knowledge.
- A team player with leadership skills.
- Maintain a positive attitude focused on customer satisfaction.
- Preferable Qualification - Automobile
(Male Candidates Only)
Age Limit : Below 45
Note: Experience Candidates Only
Good Salary (ESI,PF + Incentive)
SRINIVASA HONDA
Ph No : 9844298506

॥ ಶ್ರೀ ದ್ಯಾಮಲಾಂಬ ಪ್ರಸನ್ನ॥ ॥ ಶ್ರೀ ಬಸವೇಶ್ವರ ಪ್ರಸನ್ನ॥
**ಕೈಲಾಸ ಶಿವಗಣಾರಾಧನೆ ಆಹ್ವಾನ**
ದಾವಣಗೆರೆ ತಾಲ್ಲೂಕು ಹಾಲವರ್ತಿ ಗ್ರಾಮದ ವಾಸಿಗಳಾದ
ದೊಡ್ಡ ದ್ಯಾಮಪ್ಪರ ಶ್ರೀಮತಿ ಹೆಚ್.ಡಿ. ರೇಣುಕಮ್ಮ ಶ್ರೀ ಹೆಚ್.ಡಿ. ಬಸವರಾಜಪ್ಪ ಮತ್ತು ಶ್ರೀಮತಿ ಸುವರ್ಣಮ್ಮ ಹೆಚ್.ಡಿ. ದ್ಯಾಮಪ್ಪ
ಇವರುಗಳು ಮಾಡುವ ವಿಜ್ಞಾಪನೆಗಳು.
ದಿನಾಂಕ 01.03.2022ರ ಮಂಗಳವಾರ ಬೆಳಗಿನ ಜಾವ 12.20ಕ್ಕೆ ನಮ್ಮ ಮಕ್ಕಳಾದ



ಹೆಚ್.ಬಿ. ಹನುಮಂತಪ್ಪನವರು
ಜನನ : 23.06.1982 ಲಿಂಗೈಕ್ಯ : 01.03.2022



ಕು॥ ಹೆಚ್.ಡಿ. ಕಿರಣ್‌ರವರು
ಜನನ : 05.09.1988 ಲಿಂಗೈಕ್ಯ : 01.03.2022

ಇವರುಗಳು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 09.03.2022ನೇ ಬುಧವಾರದಂದು ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು:
ಶ್ರೀಮತಿ ಶಿವನಾಗಮ್ಮ ಶ್ರೀ ಹೆಚ್.ಡಿ. ಮಹೇಶ್ವರಪ್ಪ ಮತ್ತು ಕುಟುಂಬದವರು
ಶ್ರೀಮತಿ ಗೌರಮ್ಮ ಶ್ರೀ ಹೆಚ್.ಡಿ. ರಾಜಶೇಖರಪ್ಪ ಮತ್ತು ಕುಟುಂಬದವರು
ಶ್ರೀಮತಿ ಹೆಚ್.ಡಿ. ರೇಣುಕಮ್ಮ ಶ್ರೀ ಹೆಚ್.ಡಿ. ಬಸವರಾಜಪ್ಪ ಕುಟುಂಬದವರು
ಶ್ರೀಮತಿ ಸುವರ್ಣಮ್ಮ ಹೆಚ್.ಡಿ. ದ್ಯಾಮಪ್ಪ ಮತ್ತು ಕುಟುಂಬದವರು
ಮೃತರ ಧರ್ಮಪತ್ನಿ ಶ್ರೀಮತಿ ಶೋಭ ಪುತ್ರಿ: ಚಿ॥ ಲಿಹಾರಿಖ
ದೊಡ್ಡದ್ಯಾಮಪ್ಪರ ವಂಶಸ್ಥರು, ನೇರ್ಲಿಗೆ ಬಂಧುಗಳು,
ಬಾವಿಹಾಳ್ ಬಂಧುಗಳು ಹಾಲವರ್ತಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

॥ ಶ್ರೀ ಕರಿಸಿದ್ದೇಶ್ವರ ಸ್ವಾಮಿ ಪ್ರಸನ್ನ ॥
**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಿನಾಂಕ : 2.3.2022 ರಂದು ನಿಧನರಾದ ನಮ್ಮ ಪುತ್ರಿ
**ಹರ್ಷ ಆರ್.** ಇವರ
**'ಕೈಲಾಸ ಶಿವಗಣಾರಾಧನೆ'ಯನ್ನು**
ಗುರುವಾರ ದಿನಾಂಕ : 10.03.2022 ರಂದು ಮಧ್ಯಾಹ್ನ 12.30ಕ್ಕೆ ನಮ್ಮ ಸ್ವಗೃಹ # 894, ಕಸ್ತೂರಿ ಬಾ ಸಮಾಜ ಹಿಂಭಾಗದ ರಸ್ತೆ, 3ನೇ ಮೇನ್, 3ನೇ ಕ್ರಾಸ್, ವಿದ್ಯಾನಗರದಲ್ಲಿ ಏರ್ಪಡಿಸಲು ಗುರು ಹಿರಿಯರು ನಿಶ್ಚಯಿಸಿದ್ದು, ತಾವು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ದುಃಖ ತಪ್ತರು :
ಶ್ರೀಮತಿ ಜ್ಯೋತಿ ಮತ್ತು ಶ್ರೀ ರಾಜಶೇಖರಪ್ಪ ಹಾಗೂ ಬಂಧು-ಮಿತ್ರರು
ಮೊ. : 82772 40082, 94831 26235

# ದುರ್ಗಾಂಬಿಕಾ ದೇವಿ ಜಾತ್ರೆ ಸಿದ್ಧತೆ ಪರಿಶೀಲಿಸಿದ ವಿಪಕ್ಷ ನಾಯಕ



ದಾವಣಗೆರೆ, ಮಾ. 8 - ಇದೇ ದಿನಾಂಕ 14 ಮತ್ತು 15ರಂದು ನಡೆಯಲಿರುವ ನಗರ ದೇವತೆ ಶ್ರೀ ದುಗ್ಗಮ್ಮ ಜಾತ್ರೆ ಹಿನ್ನೆಲೆಯಲ್ಲಿ ಮಾಡಿಕೊಂಡಿರುವ ಸಿದ್ಧತೆ ಬಗ್ಗೆ ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕ ಜಿ. ಎಸ್. ಮಂಜುನಾಥ್ ಗಡಿಗುಡಾಳ್ ನೇತೃತ್ವದ ತಂಡ ಇಂದು ಭೇಟಿ ನೀಡಿ ಪರಿಶೀಲನೆ ನಡೆಸಿತು.

ಅಧಿಕಾರಿಗಳ ಜೊತೆ ಚರ್ಚೆ ನಡೆಸಿದ ಮಂಜುನಾಥ್, ನಿಗದಿತ ವೇಳೆಯಲ್ಲಿ ಕೆಲ ಕೆಲಸ ಆಗದ ಕಾರಣ ಅಸಮಾಧಾನ ಹೊರಹಾಕಿದರು.

ಜಾತ್ರೆಗೆ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ಯಾವುದೇ ರೀತಿಯ ಸಮಸ್ಯೆಗಳು ಜನರು ಹಾಗೂ ಭಕ್ತರಿಗೆ ಆಗಬಾರದು. ಈ ನಿಟ್ಟಿನಲ್ಲಿ ಕೆಲಸ ನಿರ್ವಹಿಸಬೇಕೆಂದು ಅಧಿಕಾರಿಗಳಿಗೆ ನಿರ್ದೇಶಿಸಿದರು.

ಸ್ಮಾರ್ಟ್ ಸಿಟಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಅವರು, ಎಲ್ಲೆಂದರಲ್ಲಿ ಗುಂಡಿ ಬಿದ್ದಿವೆ. ಮುಚ್ಚುವ ಕಾರ್ಯ ನಡೆಯುತ್ತಲೇ ಇದೆ. ಹಬ್ಬಕ್ಕೆ ದಿನಗಣನೆ ಶುರುವಾಗಿದೆ. ಜನರು ಬರುತ್ತಿದ್ದು, ಏನಾದರೂ ಅನಾಹುತವಾದರೆ ಯಾರು ಹೊಣೆ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ವೇಗವಾಗಿ ಕಾಮಗಾರಿ ಪೂರ್ಣಗೊಳಿಸಬೇಕು. ಅಲ್ಲಲ್ಲಿ ಬಿದ್ದಿರುವ ಗುಂಡಿಗಳು, ಅಗೆದು ಮಣ್ಣು ತೆಗೆದಿರುವ ಜಾಗದಲ್ಲಿ ಕಾಮಗಾರಿ ಬೇಗ ಪೂರ್ಣಗೊಳಿಸಿ, ಅದರ ಫೋಟೋ ಕಳುಹಿಸಿ ಕೊಡಬೇಕೆಂದು ಸೂಚಿಸಿದರು.

ಸ್ವಚ್ಚತಾ ಕಾರ್ಯಕ್ಕೆ 20 ಕಾರ್ಮಿಕರನ್ನು ನಿಯೋಜಿಸಲಾಗಿದೆ. ಅದೇ ರೀತಿಯಲ್ಲಿ ಐದು ತಂಡಗಳಾಗಿ ಕಾರ್ಯನಿರ್ವಹಿಸಲಿದ್ದು, ಸ್ವಚ್ಛತೆಗೆ ಹಾಗೂ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಿ. ಕೆಲವೆಡೆ ಕಾಂಕ್ರಿಟ್ ರಸ್ತೆಯಾಗಿಲ್ಲ. ಅರ್ಧಂಬರ್ಧ ಕೆಲಸ ಆಗಿದೆ. ನಿರ್ಲಕ್ಷ್ಯ ವಹಿಸದೇ ಪೂರ್ಣಗೊಳಿಸಿ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಗಾಂಧಿನಗರದ ಕೆಲ ಪ್ರದೇಶಗಳಿಗೆ ಭೇಟಿ ನೀಡಿದ ಮಂಜುನಾಥ್, ಈ ಭಾಗದ ಪಾಲಿಕೆ ಸದಸ್ಯರುಗಳಾದ ಎಲ್.ಡಿ. ಗೋಣೆಪ್ಪ, ಜಿ. ಡಿ. ಪ್ರಕಾಶ್ ಅವರುಗಳ ವಾರ್ಡುಗಳಿಗೆ ಭೇಟಿ ನೀಡಿ ಸಿದ್ಧತೆ ಅವಲೋಕಿಸಿದರು.

ಈ ವೇಳೆ ಮಹಾನಗರ ಪಾಲಿಕೆಯ ಸದಸ್ಯರಾದ ಜಿ. ಡಿ. ಪ್ರಕಾಶ್, ಉದಯ ಕುಮಾರ್, ವಿನಾಯಕ ಪೈಲ್ವಾನ್, ಇಟ್ಟಿಗುಡಿ ಮಂಜುನಾಥ್, ಚಮನ್ ಸಾಬ್, ನಗರ ಸಭೆ ಮಾಜಿ ಸದಸ್ಯ ಮಲ್ಲಿಕಾರ್ಜುನ್, ಎಇಇ ರವಿ, ಎಕ್ಸಿಕ್ಯೂಟಿವ್ ಎಂಜಿನಿಯರ್ ಉದಯಕುಮಾರ, ಎಇಗಳಾದ ಪ್ರವೀಣ್ ಕುಮಾರ್, ಯೂಸೂಫ್ ಆಲಿ, ಆರೋಗ್ಯ ನಿರೀಕ್ಷಕ ಮದನ ಮತ್ತಿತರರು ಹಾಜರಿದ್ದರು.

# ಮೀಸಲಾತಿ ಹೆಚ್ಚಿಸುವಂತೆ ಎಸ್ಸಿ - ಎಸ್ಟಿ ಸಮಾಜಗಳಿಂದ ಒತ್ತಾಯ

## ವಾಲ್ಮೀಕಿ ಪೀಠದ ಜಗದ್ಗುರುಗಳ ಧರಣಿ ಸತ್ಯಾಗ್ರಹ ಬೆಂಬಲಿಸಿ ಹರಿಹರದಲ್ಲಿ ಬೃಹತ್ ಪ್ರತಿಭಟನೆ



ಹರಿಹರ, ಮಾ. 8- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಾತಿ ಹೆಚ್ಚಿಸುವಂತೆ ಹಾಗೂ ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಎಸ್ಸಿ-ಎಸ್ಟಿ ಸಮಾಜಗಳ ವತಿಯಿಂದ ಮಂಗಳವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನೀರಾವರಿ ಇಲಾಖೆಯ ಶ್ರೀ ಗಣೇಶ ದೇವಸ್ಥಾನದಿಂದ ಆರಂಭವಾದ ಮೆರವಣಿಗೆಯು ಮಹಾತ್ಮ ಗಾಂಧಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ, ಸರ್ಕಾರದ ವಿರುದ್ಧ ಘೋಷಣೆ ಹಾಕಲಾಯಿತು. ರಸ್ತೆಯ ಮಧ್ಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪ್ರತಿಕೃತಿ ದಹನ ಮಾಡುವುದಕ್ಕೆ ಮುಂದಾದಾಗ ಪೊಲೀಸ್ ಸಿಬ್ಬಂದಿಗಳು ತಡೆದು ಶಾಂತಿಯುತ ಪ್ರತಿಭಟನೆ ಮಾಡುವಂತೆ ತಿಳಿಸಿದರು. ನಂತರದಲ್ಲಿ ತಹಶೀಲ್ದಾರ್ ಶಶಿಧರ್ ಅವರಿಗೆ ಮನವಿ ಸಲ್ಲಿಸಲಾಯಿತು.

ವಾಲ್ಮೀಕಿ ಗುರು ಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದ ಪುರಿ ಮಹಾಸ್ವಾಮೀಜಿ ಬೆಂಗಳೂರಿನಲ್ಲಿ ಕಳೆದ 27 ದಿನಗಳಿಂದ ಅಹೋರಾತ್ರಿ ಧರಣಿ ಸತ್ಯಾಗ್ರಹ ಮಾಡುತ್ತಿದ್ದರೂ ಸರ್ಕಾರ ಇದುವರೆಗೂ ಸ್ಪಂದಿಸಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಪ್ರಗತಿಪರ ಚಿಂತಕ ಪ್ರೊ. ಎ .ಬಿ. ರಾಮಚಂದ್ರಪ್ಪ ಅವರು, ಶೋಷಿತ ಸಮಾಜದ ಬೆಳವಣಿಗೆಗೆ ಸರ್ಕಾರ ಸರಿಯಾಗಿ ಸ್ಪಂದನೆ ನೀಡದೇ ಇದ್ದಾಗ ಹೋರಾಟದ ಮೂಲಕ ನಮ್ಮ ಹಕ್ಕುಗಳನ್ನು ಪಡೆಯಬೇಕಾಗುತ್ತದೆ ಎಂದರು.

ವಾಲ್ಮೀಕಿ ಸಮಾಜದ ಹರಿಹರ ಘಟಕದ ಅಧ್ಯಕ್ಷ ಕೆ.ಬಿ. ಮಂಜುನಾಥ್ ಮಾತನಾಡಿದರು. ಡಿಎಸ್ಎಸ್ ಜಿಲ್ಲಾಧ್ಯಕ್ಷ ಹೆಗ್ಗೆರೆ ರಂಗಪ್ಪ, ತಾ ಸಂಚಾಲಕ ಪಿ.ಜೆ. ಮಹಾಂತೇಶ್, ಬಿಎಸ್ಪಿಯ ಹನುಮಂತಪ್ಪ, ಕುರುಬ ಸಮಾಜದ ಮುಖಂಡ ಸಿ.ಎನ್. ಹುಲುಗೇಶ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಕುಂಬಳೂರು ವಾಸು, ಭೋವಿ ಕುಮಾರ್, ಯಲವಟ್ಟಿ ಕೊಟ್ರೇಶ್ ನಾಯ್ಕ್, ಪಾರ್ವತಿ ಮಾತನಾಡಿದರು.

ವಾಲ್ಮೀಕಿ ನಾಯಕ ಸಮಾಜದ ಹರಿಹರ ತಾ. ಗ್ರಾ. ಅಧ್ಯಕ್ಷ ಜಿಗಳಿಯ ಕೆ.ಆರ್. ರಂಗಪ್ಪ ಮತ್ತು ಡಿಎಸ್ಎಸ್ ಮುಖಂಡ ಸಂತೋಷ್ ನೋಟಗಾರ್ ಅವರು ಮನವಿ ಓದಿ, ತಹಶೀಲ್ದಾರ್ ಅವರಿಗೆ ಅರ್ಪಿಸಿದರು.

ರಾಜನಹಳ್ಳಿ ಮಠದ ಆಡಳಿತಾಧಿಕಾರಿ ಟಿ. ಓಬಳಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಆದಾಪುರ ವೀರಭದ್ರಪ್ಪ, ನಗರಸಭೆ ಸದಸ್ಯ ದಿನೇಶ್ ಬಾಬು, ಮಾರುತಿ ಬೇಡರ್, ಪುರಸಭೆ ಸದಸ್ಯ ಭೋವಿ ಶಿವು, ಪತ್ರಕರ್ತ ಜಿಗಳಿ ಪ್ರಕಾಶ್, ಆಟೋ ರಾಜು, ಮಕರಿ ಪಾಲಾಕ್ಷಪ್ಪ, ಬಸವರಾಜ್, ಹನುಮಂತಪ್ಪ, ರಮೇಶ್ ನಾಯ್ಕ್, ವೆಂಕಟೇಶ್, ಧನರಾಜ್, ಬಾವಿಕಟ್ಟಿ ಕರಿಬಸಪ್ಪ, ಜಿಗಳಿಯ ಬೆಣ್ಣೇರ ನಂದ್ಯಪ್ಪ, ಕೆ.ಜಿ. ಬಸವರಾಜ್, ರಾಜೇಂದ್ರ, ಕರಿಬಸಪ್ಪ, ಲೋಕೇಶ್, ಟಿ.ಎಂ. ಗದಿಗೆಪ್ಪ ನಾಯ್ಕ್, ರಾಜನಹಳ್ಳಿ ಭೀಮಣ್ಣ, ಸಿದ್ದೇಶ್ ನಾಯಕ, ಬೇವಿನಹಳ್ಳಿ ಆಟೋ ಬಸವರಾಜ್, ಕೊಕ್ಕನೂರಿನ ಹೆಚ್. ನಾಗರಾಜ್, ಮಾರುತಿ ದಾಸರ್, ವಿಶ್ವ, ನಿಟ್ಟೂರಿನ ಅಜೇಯ್, ಕೆ.ಬೇವಿನಹಳ್ಳಿ ನಾಗೇಂದ್ರಪ್ಪ ಮತ್ತಿತರರು ಹಾಜರಿದ್ದರು.

ಸಿಪಿಐ ಸತೀಶ್ ಕುಮಾರ್ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದರು.

# ಇಂದು ಪುಟ್ಟಮ್ಮ ಮಹಾರುದ್ರಯ್ಯ ಅವರ ದೇಹದಾನ



ದಾವಣಗೆರೆ, ಮಾ.8- ನಿನ್ನೆ ನಿಧನರಾದ ಸಾಮಾಜಿಕ ಸೇವಾ ಕಾರ್ಯಕರ್ತರೂ, ಮಹಿಳಾ ಸಂಘಟನೆಯ ಪ್ರಮುಖರೂ ಆದ ಶ್ರೀಮತಿ ಹೆಚ್.ಎಂ. ಪುಟ್ಟಮ್ಮ ಮಹಾರುದ್ರಯ್ಯ ಹಂಜಿಗಿಮಠ ಅವರ ಪಾರ್ಥಿವ ಶರೀರದ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ನಗರದ ಎಂ.ಸಿ.ಸಿ. ಬಿ ಬ್ಲಾಕ್ 13ನೇ ಮುಖ್ಯ ರಸ್ತೆ (ಬಾಪೂಜಿ ಶಾಲೆ ಹತ್ತಿರ) ಯಲ್ಲಿರುವ ಮೃತರ ಸ್ವಗೃಹ 'ಗೌರಾಂಬ ಸದನ' ದಲ್ಲಿ ನಾಳೆ ದಿನಾಂಕ 9ರ ಬುಧವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ ಪುಟ್ಟಮ್ಮ ಅವರ ಪಾರ್ಥಿವ ಶರೀರವನ್ನು ಇರಿಸಲಾಗುವುದು. ಪುಟ್ಟಮ್ಮ ಅವರ ಸ್ವಇಚ್ಛೆಯಂತೆ ನೇತ್ರ ದಾನ ಮಾಡಲಾಗಿದ್ದು, ಬಾಪೂಜಿ ಆಸ್ಪತ್ರೆಗೆ ದೇಹ ದಾನ ಮಾಡಲಾಗುತ್ತದೆ ಎಂದು ಅವರ ಸಹೋದರ ಟಿ.ಎಂ. ಪಂಚಾಕ್ಷರಯ್ಯ ತಿಳಿಸಿದ್ದಾರೆ.

# ಸಾವಿರ ಮಹಿಳಾ ಉದ್ಯಮಿ : ಸಚಿವ

**(1ನೇ ಪುಟದಿಂದ)** ಪಾಲ್ಗೊಂಡಿದ್ದರು.

ಮಹಿಳೆಯರ ಸಬಲೀಕರಣಕ್ಕೆ ಉತ್ತೇಜನ ನೀಡಲು ಸ್ವಸಹಾಯ ಸಂಘಗಳಲ್ಲಿ ಸಕ್ರಿಯರಾಗಿರುವ ಸ್ತ್ರೀ ಉದ್ಯಮಿಗಳಿಗೆ ಯಾವುದೇ ಖಾತ್ರಿ ಇಲ್ಲದೆ 1 ಕೋಟಿ ರೂ.ವರೆಗೂ ಬ್ಯಾಂಕ್ ಸಾಲ ಕೊಡಲಾಗುತ್ತಿದೆ. ಜೊತೆಗೆ, ಮಹಿಳೆಯರೇ ತಯಾರಿಸುತ್ತಿರುವ ಉತ್ಪನ್ನಗಳಿಗೆ ಸರಕಾರವೇ ಇ-ಕಾಮರ್ಸ್ ವೇದಿಕೆಯನ್ನು ಒದಗಿಸಲಿದೆ. ಅಲ್ಲದೆ, ಅಮೆಜಾನ್ ಮತ್ತು ಫ್ಲಿಪ್ ಕಾರ್ಟ್ ತರಹದ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಮಾರುಕಟ್ಟೆ ಸೃಷ್ಟಿಸಲಾಗುತ್ತಿದೆ ಎಂದು ಅವರು ಹೇಳಿದರು.

ಡಿಜಿಟಲೀಕರಣದ ಈ ಯುಗದಲ್ಲಿ ಮಹಿಳೆಯರು ವೈದ್ಯಕೀಯ, ಶಿಕ್ಷಣ, ಬ್ಯಾಂಕಿಂಗ್ ಮುಂತಾದ ಕ್ಷೇತ್ರಗಳಲ್ಲಿ ಮನೆಯಿಂದಲೇ ಸೇವೆ ಸಲ್ಲಿಸಬಹುದು. ಕೋವಿಡ್ ಸಾಂಕ್ರಾಮಿಕವು ಅನೇಕ ತೊಂದರೆಗಳನ್ನು ಸೃಷ್ಟಿಸಿದರೂ ಕೆಲವು ಸುಧಾರಣೆಗಳಿಗೂ ದಾರಿ ಮಾಡಿಕೊಟ್ಟಿತು. ಮಹಿಳೆಯರ ಸಬಲೀಕರಣದಲ್ಲಿ ಆಧುನಿಕ ತಂತ್ರಜ್ಞಾನದ ಪಾತ್ರ ನಿರ್ಣಾಯಕ ಮತ್ತು ಕ್ರಾಂತಿಕಾರಕವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

# ಮಠದ ಪ್ರಗತಿಯ ತೀವ್ರತೆ ಹೆಚ್ಚಿಸಲು ಬಸವರಾಜನ್ ನೇಮಕ



**(1ನೇ ಪುಟದಿಂದ)** ನನ್ನನ್ನು ಸೇರಿದಂತೆ 20 ಮಠಾಧೀಶರು ಆಗಿಹೋಗಿದ್ದಾರೆ. ಉಜ್ವಲ ಇತಿಹಾಸ ಹೊಂದಿರುವ ಮಠವನ್ನು 21ನೇ ಶತಮಾನದಲ್ಲಿ ಮುಂದುವರಿಸುತ್ತಾ ಹೋಗುತ್ತಿದ್ದೇವೆ. 14-15 ವರ್ಷಗಳಿಂದ ಶ್ರೀಮಠವನ್ನು ಕಟ್ಟಿದ್ದೇವೆ. ಅದರ ಕೀರ್ತಿ ಎಲ್ಲೆಡೆ ಪಸರಿಸುವಂತೆ ಮಾಡಿದ್ದೇವೆ. ನಾವು ಎಲ್ಲಾ ಆಡಳಿತವನ್ನು ಕೇಂದ್ರಿಕರಿಸಿಕೊಂಡಿದ್ದೆವು, ನಾವೇ ನಿರ್ವಹಿಸುತ್ತಿದ್ದೆವು. ಹಾಗಿದ್ದಾಗ್ಯೂ ಕಾನೂನು ಸಮರ ನಡೆಸಿದ್ದೆವು. ಇದು ಪ್ರಗತಿಗೆ ಅಡ್ಡಿ ಮಾಡಿತ್ತು ಎಂದು ಹೇಳಿದರು.

ಎಸ್.ಕೆ. ಬಸವರಾಜನ್ ಮಾತನಾಡಿ, ನನ್ನ ಸೇವೆಯನ್ನು ಗುರುತಿಸಿ ಶ್ರೀಗಳು ಎರಡನೇ ಬಾರಿ ಅವಕಾಶ ಮಾಡಿಕೊಟ್ಟಿದ್ದಾರೆ. ರಾಜಕೀಯಕ್ಕೆ ಹೋಗದೆ, ಅವರ ಆದೇಶದಂತೆ ನಡೆದುಕೊಳ್ಳುತ್ತೇನೆ ಎಂದು ಹೇಳಿದರು.

# ತಾಲ್ಲೂಕು ಹಂತದಲ್ಲಿಯೇ ಕೋಚಿಂಗ್

**(1ನೇ ಪುಟದಿಂದ)** ಹಾಗೂ ವೈದ್ಯಕೀಯ ಇಲಾಖೆ ಅಕಾರಿಗಳೊಂದಿಗೆ ಮುಖ್ಯಮಂತ್ರಿಗಳು ಸಭೆ ನಡೆಸಿ ಎನ್ಎಂಸಿಗೆ ಯಾವ ರೀತಿ ಶಿಫಾರಸ್ಸು ಮಾಡಬೇಕೆಂಬ ಬಗ್ಗೆ ಚರ್ಚೆ ನಡೆಸಿದ್ದಾರೆ ಎಂದರು.

ಇದಕ್ಕೂ ಮುನ್ನ ವಿಷಯ ಪ್ರಸ್ತಾಪಿಸಿದ ಖಾದರ್, ಉಕ್ರೇನ್‌ನಿಂದ ವಾಪಸ್ಸಾಗಿರುವ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಕ್ರಮ ವಹಿಸಬೇಕು. ನೀಟ್‌ನಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಒಂದು ಸಾವಿರದವರೆಗಿನ ರ್ಯಾಂಕ್‌ನಲ್ಲಿ ರಾಜ್ಯದ 50 ಮಂದಿಯೂ ಇಲ್ಲ. ಪಿಯುಸಿಗೆ ಮೌಲ್ಯವೇ ಇಲ್ಲದಂತಾಗಿದೆ. ಪಿಯುಸಿಯಲ್ಲಿ ಪಡೆದ ಶೇ.50ರಷ್ಟು, ಸಿಇಟಿಯಲ್ಲಿ ಪಡೆದ ಶೇ.50ರಷ್ಟು ಅಂಕ ಪರಿಗಣಿಸುವಂತಾಗಬೇಕು ಎಂದು ಆಗ್ರಹಿಸಿದರು.

# ತೈಲ ಬೆಲೆಯಿಂದ ಆರ್ಥಿಕತೆ ಮೇಲೆ ಪರಿಣಾಮ

**(1ನೇ ಪುಟದಿಂದ)** ಏರುಮುಖವಾಗುವ ಸಾಧ್ಯತೆ ಇದೆ. ಸೋಮವಾರ ರಾತ್ರಿ ತೈಲ ಕಂಪನಿಗಳ ಅಧಿಕಾರಿಗಳು ಸುದೀರ್ಘ ಚರ್ಚೆ ನಡೆಸಿದ್ದಾರೆ.

ಇನ್ನೆರಡು ದಿನಗಳ ಕಾಲ ಕಾದು ನೋಡಿದ ನಂತರ ಬೆಲೆ ಏರಿಕೆಯ ಕುರಿತು ಮುಂದಿನ ನಿರ್ಧಾರ ತೆಗೆದುಕೊಳ್ಳಲಾಗು ವುದು ಎಂದು ತೈಲ ಕಂಪನಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಳೆದ 4 ತಿಂಗಳಿನಿಂದ ಪೆಟ್ರೋಲ್ ಬೆಲೆ ಏರಿಕೆ ಮಾಡದಿರುವ ಕಾರಣ ಗ್ರಾಹಕರಿಗೆ ಹೆಚ್ಚು ಬಿಸಿ ತಟ್ಟಿರಲಿಲ್ಲ. ಆದರೂ, ಕಚ್ಚಾ ತೈಲದ ಬೆಲೆ ಏರಿಕೆ ಹಲವಾರು ವಲಯಗಳಲ್ಲಿ ಈಗಾಗಲೇ ಬೆಲೆ ಏರಿಕೆಗೆ ಕಾರಣವಾಗಿದೆ.

ಕಚ್ಚಾತೈಲದ ಬೆಲೆ ಹೆಚ್ಚಳ ಹಣದುಬ್ಬರದ ಮೇಲೆ ಪರಿಣಾಮ ಬೀರುವ ಕಳವಳ ಇದೆ. ಹಣದುಬ್ಬರ ಈಗಾಗಲೇ ರಿಸರ್ವ್ ಬ್ಯಾಂಕ್ ಅಪೇಕ್ಷೆಯ ಮಟ್ಟವಾದ ಶೇ.6ಕ್ಕಿಂತ ಹೆಚ್ಚಾಗಿದೆ.

## ರಷ್ಯಾ ತೈಲ ಆಮದಿನ ಮೇಲೆ ಅಮೆರಿಕ ನಿರ್ಬಂಧ

ವಾಷಿಂಗ್ಟನ್, ಮಾ. 8 – ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಲು ಅಮೆರಿಕದ ಅಧ್ಯಕ್ಷ ಜೋ ಬಿಡೆನ್ ನಿರ್ಧರಿಸಿದ್ದಾರೆ.

ರಷ್ಯಾ ಮೇಲೆ ಹಲವು ನಿರ್ಬಂಧಗಳನ್ನು ಹೇರಿದ್ದರೂ ತೈಲ ವಹಿವಾಟಿನ ಮೇಲೆ ನಿರ್ಬಂಧ ಇರಲಿಲ್ಲ. ಹೀಗಾಗಿ ರಷ್ಯಾಗೆ ಹಣದ ಹರಿವಿನಲ್ಲಿ ಹೆಚ್ಚಿನ ಸಮಸ್ಯೆ ಆಗಿರಲಿಲ್ಲ.

ತೈಲ ನಿರ್ಬಂಧ ಹೇರಲು ಬಿಡೆನ್ ಆಡಳಿತ ನಿರ್ಧರಿಸಿದ ಬೆನ್ನಲ್ಲೇ ಅಮೆರಿಕದಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಳವಾಗಿದೆ.

# ಗೋವಾ ಜವಾಬ್ದಾರಿ ಡಿ.ಕೆ.ಶಿವಕುಮಾರ್‌ಗೆ

**(1ನೇ ಪುಟದಿಂದ)** ವಾಗಲಿಲ್ಲ. ಈ ಇತಿಹಾಸ ಮರುಕಳಿಸದಂತೆ ನೋಡಿಕೊಳ್ಳಲು, ಕಾಂಗ್ರೆಸ್ ವರಿಷ್ಠರು ಎಚ್ಚೆತ್ತುಕೊಂಡು ಅಮಿತ್ ಷಾ ಅವರಿಗೆ ಎದುರೇಟು ನೀಡಲು ಶಿವಕುಮಾರ್ ಅವರಿಗೆ ಹೊಣೆಗಾರಿಕೆ ನೀಡಿದ್ದಾರೆ.

ಗುಜರಾತ್ ವಿಧಾನಸಭೆಯಿಂದ ರಾಜ್ಯಸಭೆಗೆ ಅಂದು ನಡೆದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯ ಗೆಲುವಿಗಾಗಿ ಆ ರಾಜ್ಯದ ಕಾಂಗ್ರೆಸ್ ಶಾಸಕರನ್ನು ಬೆಂಗಳೂರಿನಲ್ಲಿ ಹಿಡಿದಿಟ್ಟು, ಅಹಮದ್ ಪಟೇಲ್ ರಾಜ್ಯಸಭೆ ಪ್ರವೇಶಿಸುವಂತೆ ನೋಡಿಕೊಳ್ಳುವಲ್ಲಿ ಶಿವಕುಮಾರ್ ಯಶಸ್ವಿಯಾಗಿದ್ದರು.

ಮಹಾರಾಷ್ಟ್ರ ವಿಧಾನಸಭೆಯಲ್ಲಿ ಅತಂತ್ರ ಪರಿಸ್ಥಿತಿ ನಿರ್ಮಾಣವಾದಾಗಲೂ ಶಿವಕುಮಾರ್ ಅಲ್ಲಿನ ಕಾಂಗ್ರೆಸ್ ಶಾಸಕರನ್ನು ಕರ್ನಾಟಕಕ್ಕೆ ಕರೆತಂದು, ಅಂದು ವಿಲಾಸ್ ರಾವ್ ದೇಶ್‌ಮುಖ್ ಮುಖ್ಯಮಂತ್ರಿ ಪದವಿಗೇರಲು ಸಹಕಾರಿಯಾಗಿದ್ದರು.

ಇದನ್ನು ಮನಗಂಡ ರಾಹುಲ್ ಗಾಂಧಿ, ಈ ಬಾರಿ ಗೋವಾದಲ್ಲಿ ಶತಾಯ-ಗತಾಯ ಅಧಿಕಾರದ ಚುಕ್ಕಾಣಿ ಹಿಡಿಯಲು ತೀರ್ಮಾನಿಸಿ ಇದರ ಹೊಣೆಗಾರಿಕೆಯನ್ನು ಶಿವಕುಮಾರ್‌ಗೆ ವಹಿಸಿದ್ದಾರೆ.

ವರಿಷ್ಠರ ಸಂದೇಶ ರವಾನೆಯಾಗುತ್ತಿದ್ದಂತೆ ತಮ್ಮ ಬೆಂಬಲಿಗರ ಪಡೆಯನ್ನು ಕಟ್ಟಿಕೊಂಡು ವಿಶೇಷ ವಿಮಾನದಲ್ಲಿ ಶಿವಕುಮಾರ್ ಗೋವಾಕ್ಕೆ ತೆರಳಿದ್ದಾರೆ.

ಗೋವಾ ಸೇರಿದಂತೆ ಐದು ರಾಜ್ಯಗಳ ವಿಧಾನಸಭಾ ಫಲಿತಾಂಶ ಮಾರ್ಚ್ 10 ರಂದು ಪ್ರಕಟಗೊಳ್ಳಲಿದೆ. ಫಲಿತಾಂಶ ಪ್ರಕಟಗೊಂಡು ನಂತರ ಸರ್ಕಾರ ರಚನೆ ಆಗುವವರೆಗೂ ಶಿವಕುಮಾರ್ ಗೋವಾದಲ್ಲಿಯೇ ಬಿಡಾರ ಹೂಡಲಿದ್ದಾರೆ. ನಾಳೆ ಅಲ್ಲಿನ ಕಾಂಗ್ರೆಸ್ ನಾಯಕರು ಹಾಗೂ ವಿಧಾನಸಭೆಗೆ ಸ್ಪರ್ಧಿಸಿರುವ ಪಕ್ಷದ ಅಭ್ಯರ್ಥಿಗಳ ಸಭೆ ಕರೆಯಲಾಗಿದೆ. ಸಭೆ ಮುಗಿಯುತ್ತಿದ್ದಂತೆ ಚುನಾವಣಾ ಫಲಿತಾಂಶ ಪ್ರಕಟವಾಗುವವರೆಗೆ ಕಾಂಗ್ರೆಸ್‌ನಿಂದ ಕಣದಲ್ಲಿರುವ ಎಲ್ಲಾ ಅಭ್ಯರ್ಥಿಗಳನ್ನು ನಿಗೂಢ ಸ್ಥಳಕ್ಕೆ ಕರೆದೊಯ್ಯಲಿದ್ದಾರೆ.

# ದೇಶದ ಬದಲಾವಣೆಯ ಮೂಲವೇ ಮಹಿಳೆ

**(1ನೇ ಪುಟದಿಂದ)** ಹೇಳಿದರು.

ಕೆಲವು ಪುರುಷರು ಮೃಗಗಳಂತೆ ಹೆಣ್ಣಿನ ಮೇಲೆ ದೌರ್ಜನ್ಯ ನಡೆಸುವ ಘಟನೆಗಳೂ ನಡೆಯುತ್ತವೆ. ಇಂತಹವರಿಗೆ ತಕ್ಕ ಪಾಠ ಕಲಿಸುವ ಸಾಮರ್ಥ್ಯ ಮಹಿಳೆಗೆ ಇದೆ. ಯಾವುದೇ ದೌರ್ಜನ್ಯವನ್ನು ಸಹಿಸದೇ ಇಂಥವರಿಗೆ ಪಾಠ ಕಲಿಸಬೇಕು ಎಂದು ಜಿಲ್ಲಾಧಿಕಾರಿ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಮನೆ ಕೆಲಸದಿಂದ ಹಿಡಿದು ಎಲ್ಲ ವಲಯಗಳಲ್ಲಿ ಮಹಿಳೆ ಪ್ರತಿದಿನ ಕೊಡುಗೆ ನೀಡುತ್ತಾಳೆ. ಒಂದು ಮಗು ಉತ್ತಮವಾಗಿ ಬೆಳೆದಿದೆ ಎಂದರೆ ಅದರ ಶ್ರೇಯ ತಾಯಿಗೆ ಸಲ್ಲಬೇಕು. ತಾಯಿಗೆ ಕುಟುಂಬವನ್ನು ಸಲಹುವ, ಮಾರ್ಗದರ್ಶನ ಮಾಡುವ ಕಲೆ ಗೊತ್ತಿದೆ ಎಂದು ಹೇಳಿದರು.

ಜೀವನವನ್ನು ಸಮೃದ್ಧಗೊಳಿಸುವುದೇ ಮಹಿಳೆ. ಕುಟುಂಬದಲ್ಲಿ ಆತ್ಮೀಯತೆ ಹಾಗೂ ಕಾಳಜಿ ತೋರುವಲ್ಲಿ ಮಹಿಳೆಯೇ ಮುಂದಿರುತ್ತಾಳೆ. ಕುಟುಂಬದಲ್ಲಿ ಎದುರಾಗುವ ವಿವಿಧ ಪರಿಸ್ಥಿತಿಗಳನ್ನು ನಿಭಾಯಿಸುವ ಕಲೆ ಮಹಿಳೆಯರಲ್ಲಿ ಮಾತ್ರ ಕಂಡು ಬರುತ್ತದೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ 'ಘನತೆಯ ಬದುಕು' ಎಂಬ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ವೇದಿಕೆಯ ಮೇಲೆ ಮೇಯರ್ ಜಯಮ್ಮ ಗೋಪಿನಾಯ್ಕ್, ಉಪಮೇಯರ್ ಗಾಯತ್ರಿ ಬಾಯಿ, ಭೂ ದಾಖಲೆಗಳ ಇಲಾಖೆಯ ನಿರ್ದೇಶಕಿ ಭಾವನ ಬಸವರಾಜ್, ಡಿಯುಡಿಸಿ ಸಂಯೋಜನಾಧಿಕಾರಿ ನಜ್ಮಾ, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ವಿಜಯ್ ಕುಮಾರ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಾಲಾಕ್ಷಿ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ರೇಷ್ಮ ಕೌಸರ್, ದಾವಣಗೆರೆ ನೂತನ ತಹಶೀಲ್ದಾರ್ ಬಸವನಗೌಡ ಮತ್ತಿತರರು ಉಪಸ್ಥಿತರಿದ್ದರು.


**WANTED**

**SALES EXECUTIVE 2 NO's**
Experienced in any marketing field

**FACTORY FITTER - 2 No's ITI**

**COMPUTER OPERATOR**
Experienced in MS OFFICE, Tally

**SCHAMEG MODULAR INDUSTRIES**
behind Hotel Sai International, Davangere.
Mob: 94486 58233



॥ ಶ್ರೀ ಮುರುಘೇಶ ಕೃಪ॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥ ಶ್ರೀ ಗುರು ಬಕ್ಕೇಶ್ವರ ಕೃಪ ॥

**ಗುರು-ಲಿಂಗ-ಜಂಗಮಾರಾಧನೆ ಆಹ್ವಾನ ಪತ್ರಿಕೆ**

ಶ್ರೀಮತಿ ಮಂದಾಕಿನಿ ಮಹಲಿಂಗೇಶ್ವರ ಅಥಣಿ ಹಂಜಗಿಮಠ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 07.03.2022ರ ಸೋಮವಾರ
ರಾತ್ರಿ 11 ಗಂಟೆಗೆ ನನ್ನ ಸಹೋದರಿ
ನೇತ್ರದಾನಿ, ದೇಹದಾನಿ
**ಶರಣೆ ಪುಟ್ಟಮ್ಮ ಮಹಾರುದ್ರಯ್ಯ ಹಂಜಗಿಮಠ**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಗುರು-ಲಿಂಗ-ಜಂಗಮಾರಾಧನೆಯನ್ನು**
ದಿನಾಂಕ 11.03.2022ನೇ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ
ಶ್ರೀಮತಿ ಚನ್ನಬಸಮ್ಮ ಮೋತಿ ವೀರಪ್ಪ ಕಲ್ಯಾಣ ಮಂಟಪ, ಪಿ. ಜೆ. ಬಡಾವಣೆ, ಅಕ್ಕಮಹಾದೇವಿ ರಸ್ತೆ, ದಾವಣಗೆರೆ ಇಲ್ಲಿ
**ಪರಮಪೂಜ್ಯ ಶ್ರೀ ಡಾ।। ಶಿವಮೂರ್ತಿ ಮುರುಘಾ ಶರಣರು**
ಬೃಹನ್ಮಠ, ಚಿತ್ರದುರ್ಗ ಇವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.



ನೇತ್ರದಾನಿ, ದೇಹದಾನಿ
**ಲಿಂ. ಶರಣೆ ಪುಟ್ಟಮ್ಮ ಮಹಾರುದ್ರಯ್ಯ ಹಂಜಗಿ ಮಠ**
ಜನನ: 24.10.1941 ಲಿಂಗೈಕ್ಯ 07.03. 2022

ಇಂತಿ ದುಃಖತಪ್ತರು:
**ಶ್ರೀಮತಿ ಶಾಂಭವಿ ಜಯರಾಜ್ (ವೀಣಾ), ಶ್ರೀಮತಿ ಶ್ರೀ ವೀರೇಶ್ ಹಂಜಗಿಮಠ**
**ಹಂಜಗಿಮಠದ ವಂಶಸ್ಥರು, ತಿರುಕಪ್ಪನವರ ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು.**


# ಹರಿಹರದಲ್ಲಿ ನಾಳೆ ಅಪ್ರೆಂಟಿಸ್ ತರಬೇತಿ

ಹರಿಹರ, ಮಾ. 8- ಇಲ್ಲಿನ ಹೈಸ್ಕೂಲ್ ಬಡಾವಣೆ 5 ನೇ ಮೇನ್, 12 ನೇ ಕ್ರಾಸ್‌ನಲ್ಲಿರುವ ಖೋಡೆ ಸಿ. ವೆಂಕೂಸಾ ಕೈಗಾರಿಕಾ ತರಬೇತಿ ಕೇಂದ್ರದ ಆವರಣದಲ್ಲಿ ನಾಡಿದ್ದು ದಿನಾಂಕ 10 ರ ಗುರುವಾರ ಬೆಳಿಗ್ಗೆ 10 ಗಂಟೆಗೆ ಐಟಿಐ ಪಾಸಾದ ಶಿಕ್ಷಣಾರ್ಥಿಗಳಿಗೆ ಟೋಯೋಟಾ ಕಿರ್ಲೋಸ್ಕರ್ ಆಟೋ ಪಾರ್ಟ್ಸ್ ಪ್ರೈ. ಲಿ. ವತಿಯಿಂದ ಅಪ್ರೆಂಟಿಸ್ ತರಬೇತಿ ನೇಮಕಾತಿ ಪ್ರಕ್ರಿಯೆ ನಡೆಯಲಿದೆ.

ಈ ನೇಮಕಾತಿಯಲ್ಲಿ ಎಲೆಕ್ಟ್ರಾನಿಕ್ಸ್, ಮೆಕ್ಯಾನಿಕ್, ಫಿಟ್ಟರ್, ಎಲೆಕ್ಟ್ರೀಷಿಯನ್, ವೆಲ್ಡರ್, ಟರ್ನರ್, ಮಿಷಿನಿಸ್ಟ್, ಎಂಎಂವೈ ವೃತ್ತಿಯಲ್ಲಿ ಉತ್ತೀರ್ಣರಾದ ಶಿಕ್ಷಣಾರ್ಥಿಗಳು ಅಪ್ರೆಂಟಿಸ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 9886337664, 9901546420, 9620894026.


**ಸಾರ್ವಜನಿಕರ ಗಮನಕ್ಕೆ**

ನನ್ನ ಕಕ್ಷಿಗಾರರಾದ ಶ್ರೀಮತಿ ಸಾವಿತ್ರಮ್ಮ ಬಿ.ಸಿ. ಕೋಂ ಜಯರಾಜಪ್ಪ ಹೆಚ್., ವಾಸ : # 31/1, 6ನೇ ಕ್ರಾಸ್, ವಿನೋಬ ನಗರ, ದಾವಣಗೆರೆ ಇವರಿಗೆ ಸೇರಿದ ಆಸ್ತಿ ದಾವಣಗೆರೆ ಸಿಟಿ 5ನೇ ವಾರ್ಡ್, ಯಲ್ಲಮ್ಮ ನಗರ, ಬಡಾವಣೆ, 4ನೇ ಮೇನ್, 6ನೇ ಕ್ರಾಸ್, ಸೈಟ್ ನಂ. 36, ಡೋರ್ ನಂ. 73/4ರ ಅಳತೆ ಪೂರ್ವ-ಪಶ್ಚಿಮ 15 ಅಡಿ, ಉತ್ತರ-ದಕ್ಷಿಣ 45 ಅಡಿಯುಳ್ಳ ಸೊತ್ತಿಗೆ ಸಂಬಂಧಿಸಿದ ದಿನಾಂಕ : 09.11.1993 ರಂದು ನೋಂದಾವಣೆಯಾದ ಮೂಲ ಕ್ರಯಪತ್ರದ ಸಂಖ್ಯೆ 4430/1993-94ರ ಪತ್ರವು ಕಳೆದುಹೋಗಿರುತ್ತದೆ. ಆದ್ದರಿಂದ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಮೇಲ್ಕಂಡ ಮೂಲ ನೋಂದಾಯಿತ ಪತ್ರದ ಆಧಾರದ ಮೇಲೆ ಯಾರೂ ಸಹ ವ್ಯವಹರಿಸಬಾರದಾಗಿ ನಮ್ಮ ಕಕ್ಷಿಗಾರರು ಈ ಮೂಲಕ ವಿನಂತಿಸಿಕೊಳ್ಳುತ್ತಾರೆ. ಒಂದು ವೇಳೆ ಸದರಿ ಕ್ರಯಪತ್ರದ ಆಧಾರದಲ್ಲಿ ಯಾವುದೇ ರೀತಿಯ ವ್ಯವಹಾರಗಳಾಗಿದ್ದಲ್ಲಿ, ಮೇಲ್ಕಂಡ ಸೊತ್ತಿನ ಮಾಲೀಕತ್ವದ ಬಗ್ಗೆ ತಂಟೆ, ತಕರಾರುಗಳಿದ್ದಲ್ಲಿ ಈ ಕೆಳಕಂಡ ವಿಳಾಸದಾರರಿಗೆ 7 ದಿನಗಳೊಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ತಿಳಿಸಬೇಕಾಗಿ ವಿನಂತಿ.

**ದಾವಣಗೆರೆ.** **ಸಹಿ/- ಎ. ಹಾಲೇಶಪ್ಪ, ವಕೀಲರು, ನಂ. 1801/26, 7ನೇ ಮೇನ್**
**ದಿನಾಂಕ : 07.03.2022** **7ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ. ಮೊ. : 78290 84629**



**ವಾಸವಿ ಯುವಜನ ಸಂಘ (ರಿ)**
**ಎಸ್.ಕೆ.ಪಿ. ರಸ್ತೆ, ದಾವಣಗೆರೆ**

**ಜನ್ಮದಿನದ ಶುಭಾಶಯಗಳು**





**ಶ್ರೀ ಬಿ. ಅಮರ್‌ನಾಥ್**
ಸಹ ಕಾರ್ಯದರ್ಶಿ
ವಾಸವಿ ಯುವಜನ ಸಂಘ (ರಿ)
KSM & SRA ದಾವಣಗೆರೆ ವಿಭಾಗ
ಕಾರ್ಯಕಾರಿ ಸಮಿತಿ ಮಾಜಿ ಸದಸ್ಯರು




ಮಾತೆ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರು ಅವರಿಗೆ ಆಯುರಾರೋಗ್ಯ-ಅಷ್ಟೈಶ್ವರ್ಯ-ಸುಖ-ಶಾಂತಿ - ನೆಮ್ಮದಿ ನೀಡಲಿ ಹಾಗೂ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಲು ಶಕ್ತಿ ನೀಡಲೆಂದು ಪ್ರಾರ್ಥಿಸುತ್ತಾ, ಶುಭ ಹಾರೈಸುತ್ತೇವೆ.

**ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರು**
**ವಾಸವಿ ಯುವಜನ ಸಂಘ (ರಿ), ಎಸ್.ಕೆ.ಪಿ. ರಸ್ತೆ, ದಾವಣಗೆರೆ.**



**ಭಾವಪೂರ್ಣ ಶ್ರದ್ಧಾಂಜಲಿ**



ನಮ್ಮ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು ಹಾಗೂ ಕದಳಿ ಪ್ರಶಸ್ತಿ ಪುರಸ್ಕೃತರೂ ಆದ
**ಶರಣೆ ಹೆಚ್.ಎಂ. ಪುಟ್ಟಮ್ಮ ಮಹಾರುದ್ರಯ್ಯ**
ಅವರು ದಿನಾಂಕ 07.3.2022ರ ಸೋಮವಾರ ಲಿಂಗೈಕ್ಯರಾದ ವಿಷಯ ತಿಳಿದು ನಮಗೆಲ್ಲರಿಗೂ ಆಘಾತವಾಗಿದೆ, ಅವರ ಆತ್ಮಕ್ಕೆ ಶಾಂತಿ ದೊರಕಲಿ ಹಾಗೂ ಅವರ ಅಗಲಿಕೆಯ ನೋವನ್ನು ಭರಿಸುವಂತಹ ಶಕ್ತಿಯನ್ನು, ಕರ್ತೃ ಶ್ರೀ ಗುರು ಮುರುಘೇಶ್ವರರು ಹಾಗೂ ಶ್ರೀ ಗುರು ಶಿವಯೋಗಿ ಬಕ್ಕೇಶ್ವರರು ಅವರ ಕುಟುಂಬ ವರ್ಗದವರಿಗೆ ಕರುಣಿಸಲೆಂದು ಪ್ರಾರ್ಥಿಸುವ

**ಅಧ್ಯಕ್ಷರು ಹಾಗೂ ಸರ್ವ ಸದಸ್ಯರು**
ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ.) ದಾವಣಗೆರೆ
ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ ಸಿಬ್ಬಂದಿ ವರ್ಗದವರು
♦ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆ
♦ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ
♦ ಗುರುಬಸಮ್ಮ ವಿ. ಚಿಗಟೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆ
♦ ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆ
♦ ಶ್ರೀ ವೀರಭದ್ರಪ್ಪ ಎಂ. ಚಿಗಟೇರಿ ಹಿರಿಯ ಪ್ರಾಥಮಿಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆ
♦ ಶ್ರೀ ಶಿವಣ್ಣ ಚಿಗಟೇರಿ ಶಿಶುವಿಹಾರ ♦ ಅಕ್ಕಮಹಾದೇವಿ ಯೋಗ ಶಾಲೆ
♦ ಶೈಕ್ಷಣಿಕ ಸಲಹೆಗಾರರು ಹಾಗೂ ಅಪಾರ ಶಿಷ್ಯ ಬಳಗ



॥ ಶ್ರೀ ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು ॥



**ಭಾವಪೂರ್ಣ ಶ್ರದ್ಧಾಂಜಲಿ**



ಸಮಾಜ ಸೇವಕರೂ, ಶೈಕ್ಷಣಿಕ ಸಲಹೆಗಾರರೂ,
ನಮ್ಮ ಪೀಠದ ಶಿವದೀಕ್ಷಾ ಸೇವಾ ಕರ್ತರು , ದಾನಿಗಳೂ ಆದ
**ಶ್ರೀಮತಿ ಹೆಚ್.ಎಂ. ಪುಟ್ಟಮ್ಮ ಮಹಾರುದ್ರಯ್ಯ**
ಅವರು ದಿನಾಂಕ : 7.3.2022 ರಂದು ಲಿಂಗೈಕ್ಯರಾಗಿದ್ದು,
ಶ್ರೀಮತಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ
ಶ್ರೀ ಜಗದ್ಗುರು ಪಂಚಾಚಾರ್ಯರು
ಶ್ರೀ ಪಾರ್ವತಿ ಪರಮೇಶ್ವರರು ದಯಪಾಲಿಸಲಿ.

**ಅಧ್ಯಕ್ಷರು ಮತ್ತು ಪದಾಧಿಕಾರಿಗಳು**
**ಶ್ರೀ ಜಗದ್ಗುರು ಪಂಚಾಚಾರ್ಯ ಮಂದಿರ (ರಿ.),**
**ಶ್ರೀ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಪುಣ್ಯಾರಾಧನೆ ಸೇವಾ ಸಮಿತಿ., ಶ್ರೀ ಶೈಲ ಮಂದಿರ, ಪಿ.ಬಿ. ರಸ್ತೆ, ದಾವಣಗೆರೆ.**

# ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ಮುಂದಾಗಿ

## ಮಹಿಳಾ ದಿನಾಚರಣೆಯಲ್ಲಿ ಮಹಿಳೆಯರಿಗೆ ಜಿಲ್ಲಾ ನ್ಯಾಯಾಧೀಶರಾದ ರಾಜೇಶ್ವರಿ ಹೆಗ್ಡೆ ಕರೆ



ದಾವಣಗೆರೆ, ಮಾ.8- ಸಮಾಜದಲ್ಲಿ ಇನ್ನೂ ಜೀವಂತವಾಗಿರುವ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ಮಹಿಳೆಯರು ಮುಂದಾಗಬೇಕಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ರಾಜೇಶ್ವರಿ ಎನ್ ಹೆಗ್ಡೆ ಕರೆ ನೀಡಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘದ ಸಂಯುಕ್ತ ಆಶ್ರಯದಲ್ಲಿ ನಗರದ ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದ ಸಭಾಂಗಣದಲ್ಲಿ ಇಂದು ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರು ತಮ್ಮ ಅಭಿವೃದ್ಧಿಗಾಗಿ ಪ್ರತಿಭಟಿಸುವ, ಪ್ರಶ್ನಿಸುವ ಹಕ್ಕನ್ನು ಬೆಳೆಸಿಕೊಳ್ಳಬೇಕಾಗಿದೆ. ಶಿಕ್ಷಣದ ಮೂಲಕ ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡಬೇಕು. ಅದರೊಟ್ಟಿಗೆ ತಾರತಮ್ಯ ರಹಿತ ಸಮಾಜ ನಿರ್ಮಾಣವೂ ಪ್ರಥಮ ಆದ್ಯತೆಯಾಗಬೇಕು ಎಂದು ಹೇಳಿದರು.

ಮಹಿಳೆಯರ ಪ್ರಗತಿಯಲ್ಲಿ, ಸಮಾಜ ಸುಧಾರಣೆಯಲ್ಲಿ ಪುರುಷರ ಪಾತ್ರವು ಇದೆ. ಅವರನ್ನೂ ನಾವು ಗೌರವದಿಂದ ಕಾಣಬೇಕು. ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದ್ದ ಸ್ತ್ರೀ ಶೋಷಣೆ, ಲೈಂಗಿಕ ಶೋಷಣೆ ಸೇರಿದಂತೆ ಇನ್ನೂ ಹಲವು ಪಿಡುಗುಗಳು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗಿದ್ದು, ಇದಕ್ಕೆಲ್ಲ ಮಹಿಳೆಯರು ಶಿಕ್ಷಿತರಾಗಿ ಇರುವುದೇ ಕಾರಣ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಪ್ರೀತಿ ಎಸ್. ಸದರಜೋಶಿ ಮಾತನಾಡಿ, ಶಿಷ್ಟರಿಗೆ ಲಕ್ಷ್ಮಿಯಾಗಿ ದುಷ್ಟರಿಗೆ ಕಾಳಿಯಾಗಿ ಮಹಿಳೆಯರು ಇರಬೇಕು. ಆ ಮೂಲಕ ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದಿ ಎಲ್ಲರೊಂದಿಗೂ ಪ್ರೀತಿ ವಿಶ್ವಾಸದಿಂದ ಇದ್ದು ಸಮಾಜದ ಮುಖ್ಯವಾಹಿನಿಗೆ ಬರಬೇಕಾಗಿದೆ ಎಂದು ಕರೆ ನೀಡಿದರು.

ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಎಂ.ಎನ್ ನಂದಿನಿ ಮಾತನಾಡಿ, ಮಹಿಳೆಯರು ಜನ್ಮ ಕೊಟ್ಟ ತಂದೆ ತಾಯಿಗಳಿಗೆ, ಶಿಕ್ಷಣ ನೀಡಿದ ಗುರುಗಳಿಗೆ, ಬದುಕನ್ನು ನೀಡಿದ ಪತಿಯ ಮೇಲೆ ಗೌರವ ಹೊಂದಿರಬೇಕು ಎಂದರು.

'ಸುಸ್ಥಿರ ನಾಳೆಗಾಗಿ ಇಂದು ಲಿಂಗ ಸಮಾನತೆ' ವಿಷಯವಾಗಿ ಉಪನ್ಯಾಸ ನೀಡಿದ ಹಿರಿಯ ನ್ಯಾಯವಾದಿ ಎಲ್.ಎಚ್. ಅರುಣ್ ಕುಮಾರ್, ಲಿಂಗ ಸಮಾನತೆ ಎನ್ನುವುದು ಮಹಿಳೆಯರ ಸಮಸ್ಯೆಯಲ್ಲ. ಅದೊಂದು ಆರ್ಥಿಕ ಸಮಸ್ಯೆ. ಮಹಿಳೆಯರನ್ನು ಸಶಕ್ತಗೊಳಿಸುವ ಪ್ರಯತ್ನ ಪುರುಷರ ಪತನಕ್ಕಾಗಿ ಅಲ್ಲ ಕುಟುಂಬದ ಏಳಿಗೆಗಾಗಿ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ. ಕೆ.ಟಿ. ನಾಗರಾಜ ನಾಯ್ಕ ಮಾತನಾಡಿ, ಮಹಿಳೆ ಕೇವಲ ಕುಟುಂಬದ ಶಕ್ತಿಯಲ್ಲ, ಅವಳು ದೇಶದ, ಸಮಾಜದ ಶಕ್ತಿ. ಸ್ವಾವಲಂಬಿಯಾದರೆ ದೇಶ ಸಂಪದ್ಭರಿತ ವಾಗುತ್ತದೆ. ನೀರು ಇಲ್ಲದ ಊರು ಇಲ್ಲ, ನಾರಿ ಇಲ್ಲದ ಮನೆ ಇಲ್ಲ ಎನ್ನುವಂತೆ, ನಾರಿಯಿದ್ದರೆ ಮನೆ ಪ್ರಗತಿ ಹೊಂದಲು ಸಾಧ್ಯ ಎಂದು ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶ ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್, ನಾಲ್ಕನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ನಾಜಿಯಾ ಕೌಸರ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಪಿ.ಬಸವರಾಜ್, ಜಿ.ಸಿ.ನಟರಾಜ್, ಡಾ.ಟಿ.ಹಾಲೇಶಪ್ಪ, ರಚನಾ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಮಹಿಳೆಗೆ ಸಮಾನತೆ ಕಲ್ಪಿಸಿದರೆ ಮಹಿಳಾ ದಿನಾಚರಣೆ ಸಾರ್ಥಕತೆ



ಜಗಳೂರು, ಮಾ.8- ಮಹಿಳೆಗೆ ಸಮಾನತೆ ಕಲ್ಪಿಸಿ ಸಮಾಜದ ಮುಖ್ಯವಾಹಿನಿಗೆ ತರಬೇಕು. ಮಹಿಳೆಯನ್ನು ದೌರ್ಜನ್ಯಗಳಿಂದ ಮುಕ್ತರನ್ನಾಗಿಸಿದರೆ ಮಾತ್ರ ಮಹಿಳಾ ದಿನಾಚರಣೆ ಸಾರ್ಥಕತೆ ಬರುತ್ತದೆ ಎಂದು ಜೆಎಂಎಫ್ ಸಿ ಮತ್ತು ಸಿವಿಲ್ ನ್ಯಾಯಾಧೀಶರಾದ ಜಿ.ತಿಮ್ಮಯ್ಯ ಹೇಳಿದರು.

**ಜಗಳೂರಿನ ಜೆಎಂಎಫ್‌ಸಿ ಮತ್ತು ಸಿವಿಲ್ ನ್ಯಾಯಾಧೀಶರಾದ ಜಿ.ತಿಮ್ಮಯ್ಯ ಅಭಿಮತ**

ಪಟ್ಟಣದ ಉಜ್ಜಿನಿ ಪ್ರೌಢಶಾಲೆಯಲ್ಲಿ ಕಾನೂನು ಸೇವಾ ಸಮಿತಿ, ವಕೀಲರ ಸಂಘದಿಂದ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಸಸಿ ನೆಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಬಾಲ್ಯವಿವಾಹ ಹೆಣ್ಣು ಭ್ರೂಣ ಹತ್ಯೆ ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು. ಮಹಿಳೆಯನ್ನು ದೇವತೆಗಳಿಗೆ ಹೋಲಿಕೆ ಮಾಡಿದರೆ ಸಾಲದು ಗೌರವಿಸಿ ಕೃತಿಗೊಳಿಸಬೇಕು ಎಂದು ಸಲಹೆ ನೀಡಿದರು.

ಜಗಳೂರಿನಲ್ಲಿ ಬಾಲ್ಯವಿವಾಹದಂತಹ ಅನಿಷ್ಟ ಪದ್ಧತಿ ಜೀವಂತವಾಗಿದೆ.ಪ್ರತಿಯೊಬ್ಬರೂ ವಿರೋಧಿಸಬೇಕು. ಹೆಣ್ಣುಮಕ್ಕಳು ಜಾಗೃತರಾಗಬೇಕು. ಸಂಬಂಧಿಸಿದ ಇಲಾಖೆಗಳಿಗೆ ಮಾಹಿತಿ ನೀಡಿ ಸ್ವಯಂ ರಕ್ಷಣೆ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿ ಜೀವನದಲ್ಲಾದ ತುಂಟಾಟ, ತಮಾಷೆ, ಪೋಷಕರ ಬಡತನದ ಅನುಭವಗಳೇ ಸಾಧನೆಗೆ ಅಡಿಗಲ್ಲುಗಳು, ಸಾಧನೆ ಯಾರೊಬ್ಬರ ಸ್ವತ್ತಲ್ಲ ಯಾವುದೂ ಅಡ್ಡಿಯಲ್ಲ. ಉತ್ತಮ ಚಾರಿತ್ರ್ಯ, ಶ್ರದ್ಧೆ ಅಗತ್ಯ.

ವಿಶ್ವಮಟ್ಟದ ಓಲಂಪಿಕ್ ಕ್ರೀಡೆಗಳಲ್ಲಿ ಸಾಧನೆಗೈದವರಲ್ಲಿ ಗ್ರಾಮೀಣ ಭಾಗದ ಬಡ ಕುಟುಂಬದವರೇ ಹೆಚ್ಚಾಗಿದ್ದಾರೆ. ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ, ಪರೀಕ್ಷೆ ಫಲಿತಾಂಶದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದವರಲ್ಲಿ ಬಡ ಕುಟುಂಬದ ಮಕ್ಕಳೇ ಅಧಿಕ ಎಂಬುದನ್ನು ಪ್ರತಿನಿತ್ಯ ಪತ್ರಿಕೆಗಳಲ್ಲಿ ಓದುತ್ತೇವೆ. ಉತ್ತಮ ಸಾಧನೆಗೆ ಪೋಷಕರೇ ಸ್ಫೂರ್ತಿ ಎಂದು ಅಭಿಮತ ವ್ಯಕ್ತಪಡಿಸಿದರು.

ಪ್ರಾಸ್ತಾವಿಕವಾಗಿ ವಕೀಲ ಸಣ್ಣ ಓಬಯ್ಯ ಮಾತನಾಡಿ, ಅಭಿವೃದ್ಧಿ ರಾಷ್ಟ್ರಗಳಲ್ಲಿ ಮಹಿಳೆಯರಿಗೆ ವಿಶೇಷ ಗೌರವವಿದೆ. ಆದರೆ ಭಾರತದಲ್ಲಿ ಮಹಿಳಾಪರ ಸಾಕಷ್ಟು ಕಾನೂನುಗಳು ಜಾರಿಯಲ್ಲಿದ್ದರೂ ಮಹಿಳೆ ಶೋಷಣೆಗೊಳಗಾಗಿದ್ದು. ಮೌಢ್ಯ ಮುಕ್ತ ಸಮಾಜ ನಿರ್ಮಾಣಕ್ಕೆ ಶಿಕ್ಷಣ ಅಗತ್ಯ ಎಂದರು.

ಹಿರಿಯ ವೈ.ಹನುಮಂತಪ್ಪ ಮಾತನಾಡಿ, ಮಹಿಳೆಯರ ಅವಿರತ ಸೇವೆಯಿಂದ ಕುಟುಂಬದ ನೆಮ್ಮದಿಯ ಜೀವನ ಸಾಧ್ಯ. ಆದರೆ ಮಾತ್ರ ದೇವೋಭವ ಎನ್ನುವವರಿಂದ ದೌರ್ಜನ್ಯ ಸಲ್ಲದು, ಪ್ರತಿಯೊಬ್ಬರೂ ಕಾನೂನಿನ ಪ್ರಜ್ಞೆ ಅರಿಯಬೇಕು ಎಂದು ಹೇಳಿದರು.

ವಕೀಲರಾದ ಜ್ಯೋತಿ ಮಾತನಾಡಿ, ಶತಮಾನಗಳಿಂದ ವಿಶ್ವಮಟ್ಟದಲ್ಲಿ ಮಹಿಳಾ ದಿನಾಚರಣೆ ಆಚರಿಸಲಾಗುತ್ತಿದ್ದು, ವಿವಿಧ ಕ್ಷೇತ್ರಗಳಲ್ಲಿ ಮಹಿಳೆ ತನ್ನದೇ ಛಾಪು ಮೂಡಿಸಿ ಮಹಿಳೆ ಅಬಲೆಯಲ್ಲ ಸಬಲೆ ಎಂದು ಸಾಬೀತುಪಡಿಸಿದ್ದಾಳೆ ಎಂದರು.

ಈ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷ ಓಂಕಾರಪ್ಪ, ಪ್ರಧಾನ ಕಾರ್ಯದರ್ಶಿ ರುದ್ರೇಶ್, ವಕೀಲರಾದ ಟಿ.ಬಸವರಾಜ್, ನಾಗರತ್ನಮ್ಮ, ನಾಗೇಶ್, ತಿಪ್ಪೇಸ್ವಾಮಿ, ಭೂಪತಿ, ಜಯ್ಯಣ್ಣ, ಮುಖ್ಯಶಿಕ್ಷಕ ಶರಣಪ್ಪ, ಶಿಕ್ಷಕರಾದ ಸಾವಿತ್ರಮ್ಮ, ಪ್ರಕಾಶ್, ಶ್ರೀಧರ್, ಚಂದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.

# ನೃತ್ಯಪಟು ಮಾಧವಿ ಅವರ ಪರಿಕಲ್ಪನೆ ಅದ್ಭುತ



ದಾವಣಗೆರೆ, ಮಾ. 8- ಭರತ ನಾಟ್ಯ ಕಲೆಯನ್ನು ಸಾಮಾನ್ಯರಿಗೆ ಎಟುಕುವ ಕಲೆಯನ್ನಾಗಿ ಕಲಿಸುತ್ತಿರುವ ಮಾಧವಿ ಡಿ.ಕೆ. ಅವರ ಪರಿಕಲ್ಪನೆ ಅದ್ಭುತವಾದದ್ದು.

ಈ ಕಲೆ ದಾವಣಗೆರೆಯ ಕಲಾಸಕ್ತರಿಗೆ ಲಭಿಸುತ್ತಿರುವುದು ಅತ್ಯಂತ ಸಂತೋಷದ ವಿಷಯ ಎಂದು ದಿನೇಶ್ ಕೆ. ಶೆಟ್ಟಿ ತಿಳಿಸಿದರು.

ನಗರದ ರಿಂಗ್ ರಸ್ತೆಯ ಶ್ರೀ ಶಾರದಾ ಮಂದಿರದಲ್ಲಿ ನಡೆದ ನಮನ ಅಕಾಡೆಮಿಯ ಶಿವಸ್ಮರಣೆ ನೃತ್ಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು. ಶಂಕರ ಸೇವಾ ಸಂಘದ ಅಧ್ಯಕ್ಷ ಡಾ. ಬಿ.ಟಿ. ಅಚ್ಯುತ್, ಹಿರಿಯ ವೈದ್ಯ ಡಾ. ಎ.ಎಂ. ಶಿವಕುಮಾರ್ ಮಾತನಾಡಿದರು.

ಮಾಧವಿ ಅವರ ಶಿವಾಷ್ಟಕಮ್ ನೃತ್ಯ ಪ್ರದರ್ಶನದ ವೇಳೆಗೆ ತರಳಬಾಳು ಬಡಾವಣೆ ಸ್ವಸ್ತಿ ಆರ್ಟ್ ಗ್ಯಾಲರಿ ಪ್ರೊಪ್ರೈಟರ್ ರವಿ ಹುದ್ದಾರ್ ರಚಿಸಿದ ಶಿವನ ಚಿತ್ರ ಎಲ್ಲರ ಮೆಚ್ಚುಗೆ ಗಳಿಸಿತು.

ನೃತ್ಯ ಜಾಗರಣೆ ಕಾರ್ಯಕ್ರಮ ಲಿಂಗೇಶ್ವರ ದೇವಸ್ಥಾನ, ಶ್ರೀ ಕೂಡಲಿ ಶಂಕರ ಮಠ, ವಿದ್ಯಾನಗರದ ಈಶ್ವರ ಪಾರ್ವತಿ ದೇವಸ್ಥಾನಗಳಲ್ಲಿ ಜರುಗಿತು. ಅಕಾಡೆಮಿಯ ಗುರು ಹಾಗೂ 8 ಜನ ಶಿಷ್ಯರು ಸುಮಾರು 40 ನಿಮಿಷಗಳವರೆಗೆ ಪ್ರದರ್ಶನ ನೀಡಿದರು. ನಮನ ಅಕಾಡೆಮಿಯ ಅಧ್ಯಕ್ಷ ಗೋಪಾಲಕೃಷ್ಣ ಕಾರ್ಯಕ್ರಮ ನಿರೂಪಿಸಿದರು. ಅಕಾಡೆಮಿಯ ನಿರ್ದೇಶಕ ಪಿ.ಸಿ. ರಾಮನಾಥ್, ಅನಿಲ್ ಬಾರೆಂಗಳ್ ಮತ್ತು ಇತರರು ಉಪಸ್ಥಿತರಿದ್ದರು.

# ವ.ಬಸವಾಪುರದಲ್ಲಿ ನಾಳೆ ರಥೋತ್ಸವ



ಮಲೇಬೆನ್ನೂರು, ಮಾ.8- ವಡೆಯರ ಬಸವಾಪುರ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವವು ನಾಡಿದ್ದು ದಿನಾಂಕ 10ರ ಗುರುವಾರ ಬೆಳಿಗ್ಗೆ 9 ಗಂಟೆಗೆ ಜರುಗಲಿದೆ. ರಥೋತ್ಸವದ ಅಂಗವಾಗಿ ಬುಧವಾರ ಬೆಳಿಗ್ಗೆ 8 ಗಂಟೆಗೆ ವಿಶೇಷ ಪೂಜೆ, ಉಚ್ಚಾಯ ಮತ್ತು ರಾತ್ರಿ 8ಕ್ಕೆ ಕಂಕಣಧಾರಣೆ ಹಾಗೂ ಕಳಸಾರೋಹಣ ನಡೆಯಲಿದೆ. ಗುರುವಾರ ಬೆಳಿಗ್ಗೆ ರಥೋತ್ಸವದ ನಂತರ ಸಂಜೆ 4 ಕ್ಕೆ ಓಕುಳಿ, 7 ಕ್ಕೆ ಸನ್ಮಾನ ಮತ್ತು ತೃಪ್ತಿ ಮೆಲೋಡಿಯಸ್ ಆರ್ಕೆಸ್ಟ್ರಾ ಇವರಿಂದ ರಸಮಂಜರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

# ಹಳ್ಳಿಹಾಳ್‌ನಲ್ಲಿ ನಾಳೆ ರಥೋತ್ಸವ



ಮಲೇಬೆನ್ನೂರು, ಮಾ.8- ಹಳ್ಳಿಹಾಳ್ ಗ್ರಾಮದ ಶ್ರೀ ಮುರುಡ ಬಸವೇಶ್ವರ ರಥೋತ್ಸವವು ನಾಡಿದ್ದು ದಿನಾಂಕ 10ರ ಗುರುವಾರ ಸಂಜೆ 4 ಗಂಟೆಗೆ ಜರುಗಲಿದೆ. ರಥೋತ್ಸವದ ಅಂಗವಾಗಿ ಬುಧವಾರ ಬೆಳಿಗ್ಗೆ 9 ಗಂಟೆಗೆ ಉಚ್ಚಾಯ, ರಾತ್ರಿ 8 ಗಂಟೆಗೆ ರಥಕ್ಕೆ ಕಳಸಾರೋಹಣ ನಡೆಯಲಿದೆ.

# ದೇವರಹಟ್ಟಿಯಲ್ಲಿ ಇಂದು ಪಲ್ಲಕ್ಕಿ ಸೇವೆ



ದಾವಣಗೆರೆ ತಾಲ್ಲೂಕಿನ ದೇವರಹಟ್ಟಿಯ ಶ್ರೀ ದೇವರಹಟ್ಟಿ ಬಸವಣ್ಣನ ರಥೋತ್ಸವದ ಪ್ರಯುಕ್ತ ಇಂದು ಬೆಳಿಗ್ಗೆ 9 ಗಂಟೆಗೆ ಪಲ್ಲಕ್ಕಿ ಸೇವೆ ನಡೆಯಲಿದೆ.

# ಬಲ್ಲೂರಿನಲ್ಲಿ ಇಂದು ರಥೋತ್ಸವ

ದಾವಣಗೆರೆ ತಾಲ್ಲೂಕು ಬಲ್ಲೂರು ಗ್ರಾಮದ ಶ್ರೀ ವೀರ ಭದ್ರೇಶ್ವರ ಸ್ವಾಮಿ ರಥೋತ್ಸವ ಹಾಗೂ ಸಾಮೂಹಿಕ ವಿವಾಹ ಇಂದು ನಡೆಯಲಿವೆ. ಬೆಳಿಗ್ಗೆ 10.30 ರಿಂದ 11.30 ರವರೆಗೆ ಸಾಮೂಹಿಕ ವಿವಾಹ, ಬೆಳಿಗ್ಗೆ 11.45 ಕ್ಕೆ ರಥೋತ್ಸವ, ಸಂಜೆ 7 ಕ್ಕೆ ಸ್ವಾಮಿಯ ಓಕುಳಿ ಜರುಗಲಿದೆ.

# ನಗರದಲ್ಲಿ ಇಂದು ಕೋವಿಶೀಲ್ಡ್, ಬೂಸ್ಟರ್ ಡೋಸ್ ಲಸಿಕೆ ಕಾರ್ಯಕ್ರಮ

ವಿದ್ಯಾನಗರ ರೋಟರಿ ಸಂಸ್ಥೆಯಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಕೋವಿಶೀಲ್ಡ್ ಮತ್ತು ಬೂಸ್ಟರ್ ಡೋಸ್ ಲಸಿಕೆ ಹಾಕಲಾಗುವುದು. ವಿವರಕ್ಕೆ ಸಂಪರ್ಕಿಸಿ : 88929 88989.

# ಸಾವಿನ ಪರಿಹಾರಕ್ಕೆ ತೆರಿಗೆ ವಿಧಿಸಬಹುದೇ ?

**ಆದಾಯ ತೆರಿಗೆ ಇಲಾಖೆಗೆ ಹೈಕೋರ್ಟ್ ಪ್ರಶ್ನೆ**

ಅಹಮದಾಬಾದ್, ಮಾ. 8 – ಸಾವಿಗಾಗಿ ನೀಡಿದ ಪರಿಹಾರವನ್ನು ಆದಾಯ ಎಂದು ಪರಿಗಣಿಸಬಹುದೇ ಮತ್ತು ಅದಕ್ಕೆ ಆದಾಯ ತೆರಿಗೆ ಹೇರಬಹುದೇ ಎಂಬ ಪ್ರಶ್ನೆಯನ್ನು ಗುಜರಾತ್ ಹೈಕೋರ್ಟ್ ಆದಾಯ ತೆರಿಗೆ ಇಲಾಖೆಯ ಮುಂದಿಟ್ಟಿದೆ.

1986ರಲ್ಲಿ ಪ್ಯಾನ್ ಅಮೆರಿಕನ್ ವರ್ಲ್ ಏರ್‌ವೇಯ್ಸ್ ವಿಮಾನ ಅಪಹರಣಕ್ಕೀಡಾದಾಗ ಮೃತಪಟ್ಟಿದ್ದ ಮಹಿಳೆಯ ಪತಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ. ಆ ಅರ್ಜಿಯ ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ನಿಶಾ ಠಾಕೋರ್ ಅವರನ್ನು ಒಳಗೊಂಡ ಪೀಠ, ಪರಿಹಾರದ ಹಣವನ್ನೂ ಆದಾಯ ಎಂದು ಪರಿಗಣಿಸಬಹುದೇ? ಎಂದು ಕೇಳಿದೆ.

1896ರಲ್ಲಿ ಉಗ್ರರು ಪ್ಯಾನ್ ಅಮೆರಿಕ ವಿಮಾನ ಅಪಹರಿಸಿದ್ದರು. ನ್ಯೂಯಾರ್ಕ್‌ನಿಂದ ಹೊರಟಿದ್ದ ವಿಮಾನ ಮುಂಬೈಗೆ ಬರಬೇಕಿತ್ತು. ಮಧ್ಯದಲ್ಲೇ ಅದನ್ನು ತಡೆದು ಕರಾಚಿಯಲ್ಲಿ ಇಳಿಸಲಾಗಿತ್ತು.

ಹೈಜಾಕರ್‌ಗಳು ವಿಮಾನದಲ್ಲಿದ್ದ 50 ಕ್ಕೂ ಹೆಚ್ಚು ಜನರನ್ನು ಹತ್ಯೆ ಮಾಡಿದ್ದರು.

2013-15ರ ಅವಧಿಯಲ್ಲಿ ಮೃತಪಟ್ಟವರಲ್ಲಿ ಒಬ್ಬರಾದ ತೃಪ್ತಿ ಪತಿ ಕಲ್ಪೇಶ್‌ಗೆ ನ್ಯೂಯಾರ್ಕ್ ನ್ಯಾಯಾಲಯ 20 ಕೋಟಿ ರೂ.ಗಳ ಪರಿಹಾರ ನೀಡಿತ್ತು. ಈ ಪರಿಹಾರವನ್ನು 2014-15ರ ಆದಾಯ ತೆರಿಗೆ ಅಸೆಸ್‌ಮೆಂಟ್‌ನಲ್ಲಿ ಅವರು ತೋರಿಸಿರಲಿಲ್ಲ.

ಈ ಬಗ್ಗೆ ಸಮನ್ಸ್ ಕಳಿಸಿದ್ದ ಆದಾಯ ತೆರಿಗೆ ಇಲಾಖೆ, ಪರಿಹಾರದ ಹಣದಲ್ಲಿ ತೆರಿಗೆ ಪಾವತಿಸುವಂತೆ ತಿಳಿಸಿತ್ತು. ಕಳೆದ ವರ್ಷ ಇಲಾಖೆ ಪ್ರಕರಣಕ್ಕೆ ಮರು ಚಾಲನೆ ನೀಡಿತ್ತು. ನಂತರ ಕಲ್ಪೇಶ್ ಹೈಕೋರ್ಟ್ ಮೊರೆ ಹೋಗಿದ್ದಾರೆ.


# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 07-03-22 ರ ಸೋಮವಾರ ನಿಧನರಾದ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಶಿವಣ್ಣ ಚಿಗಟೇರಿ ಶಿಶುವಿಹಾರ ಹಾಗೂ ಶ್ರೀಮತಿ ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಸಂಸ್ಥಾಪಕ ಮುಖ್ಯೋಪಾಧ್ಯಾಯನಿಯವರು, ನಮ್ಮೆಲ್ಲರ ಬದುಕಿನ ಮಾರ್ಗದರ್ಶಕರು ಆದ

**ಶ್ರೀಮತಿ ಹೆಚ್.ಎಂ. ಪುಟ್ಟಮ್ಮ ಮಹಾರುದ್ರಯ್ಯನವರಿಗೆ**

ಭಾವಪೂರ್ಣ ಶ್ರದ್ಧಾಂಜಲಿ.

◆ ಕೆ.ಎಲ್.ಹರೀಶ್ ಬಸಾಪುರ ◆ ಆನಂದ ಕುಮಾರ್ ಶಿವಸಾಲಿ ◆ ಗುರು ಮಾಗಾನಹಳ್ಳಿ
◆ ಬಿ.ಪಿ. ವೀರೇಂದ್ರ ಕುಮಾರ್ ◆ ಎ.ಪಿ. ಸುಜಿತ್ ◆ ಬಿ.ಎಸ್. ಸಿದ್ದಲಿಂಗೇಶ್ವರ
◆ ನೀಲೇಶ್ ಸಾಂಗ್ವಿ ◆ ಕಲ್ಪೇಶ್ ಆರ್. ಜೈನ್ ◆ ಅಬ್ದುಲ್ ರೆಹಮಾನ್
◆ ಬಿ.ಎಂ. ಶಿವಕುಮಾರ್ ◆ ಕೆ. ವಿನಯ್ ◆ ತೇಜಸ್ ಶಾ ◆ ವೈ.ಎಸ್. ಚನ್ನಪ್ಪ
◆ ಸುನೀಲ್ ಕುಮಾರ್ ಪಾಟೀಲ್ ◆ ವಿಜಯ್ ಐ.ಆರ್ ◆ ಶರತ್
◆ ಸಲ್ಮಾ ಇ. ಶೇಖ್ ◆ ದೀಪ್ತಿ ರಾಣಿ ಜಿ.ಎಸ್. ◆ ವಿದ್ಯಾ ಎಂ.ಎಸ್ ◆ ನಾಜಿಯಾ ಎಂ.ಎಸ್
◆ ಶ್ವೇತಾ ಜಿ.ಎನ್. ◆ ಕವಿತಾ ಜೆ.ಕೆ. ◆ ಸುನಿತಾ ಟಿ.ಪಿ. ◆ ಎಂ. ಲಕ್ಷ್ಮಿ ◆ ಎಂ. ಕಾಮಾಕ್ಷಿ
◆ ಎಸ್.ಕೆ. ದೀಪಾ ◆ ಎಸ್. ದೀಪಾ ◆ ಎಸ್. ಶ್ವೇತ ◆ ಪಾಯಲ್ ಜೈನ್ ◆ ಶಬೀನಾ ಬಾನು


# ಬಿಐಇಟಿ : ಎಂ.ಬಿ.ಎ. ಕಾಲೇಜಿಗೆ ರ್‍ಯಾಂಕ್



ದಾವಣಗೆರೆ. ಮಾ.8- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು 2020-21ನೇ ಸಾಲಿನಲ್ಲಿ ನಡೆಸಿದ ಎಂ.ಬಿ.ಎ ಪರೀಕ್ಷೆಯಲ್ಲಿ ಕು. ಆರ್.ಕೆ. ಸ್ವಾತಿ 9ನೇ ರ್‍ಯಾಂಕ್ ಗಳಿಸಿದ್ದಾರೆ ಎಂದು ಕಾಲೇಜಿನ ನಿರ್ದೇಶಕ ಡಾ. ಸ್ವಾಮಿ ತ್ರಿಭುವಾನಂದ ಹೆಚ್.ವಿ ತಿಳಿಸಿದ್ದಾರೆ. ಸ್ವಾತಿ ಸಾಧನೆಗೆ ಬಾಪೂಜಿ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಶಾಮನೂರು ಶಿವಶಂಕರಪ್ಪ, ಜಂಟಿ ಕಾರ್ಯದರ್ಶಿ ಶಾಮನೂರು ಮಲ್ಲಿಕಾರ್ಜುನ್, ಕಾಲೇಜಿನ ಅಧ್ಯಕ್ಷ ಅಥಣಿ ವೀರಣ್ಣ, ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ಅಭಿನಂದಿಸಿದ್ದಾರೆ.

# ಎಸ್‌ಜೆಎಂಐಟಿಗೆ 8ನೇ ರ್‍ಯಾಂಕ್



ಚಿತ್ರದುರ್ಗ, ಮಾ. 8- ನಗರದ ಎಸ್.ಜೆ.ಎಂ. ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿನಿ ಪಿ. ನಯನ ಅವರು 2021-22ನೇ ಸಾಲಿನಲ್ಲಿ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ಪರೀಕ್ಷೆಯಲ್ಲಿ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗದಲ್ಲಿ 8ನೇ ರ್‍ಯಾಂಕ್ ಪಡೆದಿದ್ದಾರೆ.



# ತಹಶೀಲ್ದಾರ್ ಆಗಿ ಬಸನಗೌಡ

ದಾವಣಗೆರೆ, ಮಾ.8- ತಾಲ್ಲೂಕಿನ ನೂತನ ತಹಶೀಲ್ದಾರ್ ಆಗಿ ಬಸನಗೌಡ ಕೋಟೂರು ಅವರು ನಿನ್ನೆ ಅಧಿಕಾರ ಸ್ವೀಕರಿಸಿದರು. ಈ ಸಂದರ್ಭದಲ್ಲಿ ನಿರ್ಗಮಿತ ತಹಶೀಲ್ದಾರ್ ಗಿರೀಶ್ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ವಾಣಿ ರೈಸ್ ಮಿಲ್ ಹಿಂಭಾಗ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು ಹಾಗೂ ಜಯನಗರ ಫೀಡರ್ ವ್ಯಾಪ್ತಿಯ ನಿಟುವಳ್ಳಿ, ನಿಟುವಳ್ಳಿ ಹೊಸ ಬಡಾವಣೆ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, 60 ಅಡಿ ರಸ್ತೆ, ಎಸ್‌ಎಸ್ ಹೈಟೆಕ್ ಆಸ್ಪತ್ರೆ, ಭಗೀರಥ ಸರ್ಕಲ್, ಕರಿಯಮ್ಮ ದೇವಸ್ಥಾನ, ಮಣಿಕಂಠ ಸರ್ಕಲ್ ಚರ್ಚ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


# ಅಭಿನಂದನೆಗಳು



ಸಾಮಾಜಿಕ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಅನನ್ಯ ಸೇವೆಗಾಗಿ ಇಂಡಿಯನ್ ಎಂಪೈರ್ ವಿಶ್ವವಿದ್ಯಾನಿಲಯದಿಂದ 2022ನೇ ಸಾಲಿನ "ಗೌರವ ಡಾಕ್ಟರೇಟ್" ಪುರಸ್ಕಾರಕ್ಕೆ ಭಾಜನರಾಗಿರುವ ದಾವಣಗೆರೆ ಜಿಲ್ಲೆ ಮಾಯಕೊಂಡ ಕ್ಷೇತ್ರದ ಗೊಲ್ಲರಹಳ್ಳಿಯವರಾದ ರಾಷ್ಟ್ರೀಯ ಗೋ ಸೇವಾ ಸಂಘದ ಕರ್ನಾಟಕ ರಾಜ್ಯಾಧ್ಯಕ್ಷರೂ, ತಿರುಪತಿ ತಿರುಮಲ ದಾಸ ಸಾಹಿತ್ಯ ಪ್ರಾಜೆಕ್ಟ್ ದಾವಣಗೆರೆ ಜಿಲ್ಲಾಧ್ಯಕ್ಷರೂ, ಕರ್ನಾಟಕ ಪ್ರಭಾರ ಅಧ್ಯಕ್ಷರೂ, ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಿಜೆಪಿ ಹಿರಿಯ ಮುಖಂಡರೂ, ನಮ್ಮ ಆತ್ಮೀಯರೂ ಆದ

**ಶ್ರೀ ಜಿ.ಟಿ. ಸಿದ್ದಪ್ಪ**

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

**ಶ್ಯಾಮ್ ಜಿ.ಎಸ್.**
ಮಾಯಕೊಂಡ ಕ್ಷೇತ್ರದ ಬಿಜೆಪಿ ಯುವ ನಾಯಕ

ಜಿ.ಟಿ. ಚಂದ್ರಪ್ಪ, ಡಿ.ಎಸ್.ಎಸ್. ಬಸವರಾಜು, ಕಾರಿಗನೂರು ನಿಜಲಿಂಗಪ್ಪ, ಕಲ್ಲಿಂಗಪ್ಪ ಮೋಹನ್, ಅಣಜಿ ಬಸವರಾಜು, ಜಿ.ಟಿ. ಬಲರಾಮ ಜಿ.ಟಿ. ಶಾಂತಕುಮಾರ್, ರಾಘವೇಂದ್ರ, ಟಿ. ರಮೇಶ್, ಟಿ. ಪ್ರಕಾಶ್, ಟಿ. ನವೀನ್ , ಜಿ. ಟಿ. ಗಂಗಾಧರ್, ಜಿ.ಕೆ. ವೆಂಕಟೇಶ್, ಜಿ.ಸಿ. ದೇವರಾಜ್, ಜಿ.ಸಿ. ಶ್ರೀನಿವಾಸ್, ದೊಡ್ಡಘಟ್ಟ ವೆಂಕಟೇಶ್, ಪರಶುರಾಮ್, ಟಿ. ಲೋಕೇಶ್, ಜಿ.ಕೆ. ಗೋವಿಂದ, ಸಂಪತ್, ಹೆಚ್. ಬಸವರಾಜ್, ಅರ್ಜುನ್, ಪ್ರಭು, ಹನುಮಂತ ಪೈ, ವರ್ಪಣ, ನಂದಕುಮಾರ್, ಎಂ.ಡಿ. ಅರುಣ್ ಕುಮಾರ್, ಬಿ.ಬಿ. ಶರತ್, ಮನು, ಎನ್. ಅಭಿ, ಮಧು, ರುದ್ರೇಶ್ ಎನ್.ಹೆಚ್., ಪ್ರಕಾಶ್, ಅನಿಲ್ ಕುಮಾರ್ ಎಂ.ಡಿ., ನರಗನಹಳ್ಳಿ, ಗೊಲ್ಲರಹಳ್ಳಿ ಗ್ರಾಮಸ್ಥರು



**ಶ್ಯಾಮ್ ಜಿ.ಎಸ್.**
ಮಾಯಕೊಂಡ ಕ್ಷೇತ್ರದ ಬಿಜೆಪಿ ಯುವ ನಾಯಕ

**ಶ್ಯಾಮ್ ಜಿ.ಎಸ್. ಅಭಿಮಾನಿ ಬಳಗ**



# ಭಾವಪೂರ್ಣ ಶ್ರದ್ಧಾಂಜಲಿ



ಜನತಾ ಬಜಾರ್ ನಿರ್ದೇಶಕರೂ, ನ್ಯಾಯಬೆಲೆ ಅಂಗಡಿ ಮಾಲೀಕರೂ, ಕಕ್ಕರಗೊಳ್ಳದ ಜಮೀನ್ದಾರರೂ ಆದ

**ಶ್ರೀ ಹೆಚ್. ವಿಷ್ಣುಪಂತ್ ಚಾಲುಕ್ಯ**

ಅವರು ದಿನಾಂಕ 27.2.2022ರಂದು ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಅಧ್ಯಕ್ಷರು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ**

**ಜನತಾ ಬಜಾರ್, ದಾವಣಗೆರೆ.**


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte